ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 4 । ಸಂಚಿಕೆ : 9 । ಸೆಪ್ಟೆಂಬರ್ - 2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ




## ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ನೂತನ ಆಡಳಿತ ಕಚೇರಿಯ ವಿನ್ಯಾಸ

### ಕಟ್ಟಡ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿದ್ದು ಮುಕ್ತಾಯ ಹಂತದಲ್ಲಿದೆ



# ಜಿ.ಎಸ್.ಟಿ. : ಆಗಸ್ಟ್ ತಿಂಗಳಲ್ಲಿ 1.43 ಲಕ್ಷ ಕೋಟಿ ವರಮಾನ ಸಂಗ್ರಹ

**ನವದೆಹಲಿ** : ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಆಗಸ್ಟ್‌ನಲ್ಲಿ 71.43 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜುಲೈನಲ್ಲಿ ಆಗಿದ್ದ 71.49 ಲಕ್ಷ ಕೋಟಿಗೆ ಹೋಲಿಸಿದರೆ 15,383 ಕೋಟಿ ಕಡಿಮೆ ಆಗಿದೆ. 2021ರ ಆಗಸ್ಟ್‌ನಲ್ಲಿ 71.12 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ 2022ರ ಆಗಸ್ಟ್‌ನಲ್ಲಿ ಶೇ.28ರಷ್ಟು ಹೆಚ್ಚು ಸಂಗ್ರಹ ಆದಂತಾಗಿದೆ. ಸತತ ಆರನೇ ತಿಂಗಳಿನಲ್ಲಿಯೂ ಜಿಎಸ್‌ಟಿ ಸಂಗ್ರಹವು 11.4 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ. ಮುಂಬರುವ ಹಬ್ಬದ ಋತುವಿನಲ್ಲಿ ಜಿಎಸ್‌ಟಿ ಸಂಗ್ರಹವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆಗಸ್ಟ್‌ನಲ್ಲಿ ಸಂಗ್ರಹ ಆಗಿರುವ ತೆರಿಗೆಯಲ್ಲಿ ಸಿಜಿಎಸ್‌ಟಿ 124,710 ಕೋಟಿ, ಎಸ್‌ಜಿಎಸ್‌ಟಿ 730,951 ಕೋಟಿ, ಐಜಿಎಸ್‌ಟಿ 177,782 ಕೋಟಿ ಹಾಗೂ ಸೆಸ್ 710,168 ಕೋಟಿ ಸೇರಿದೆ.

'ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿರುವುದು ಹಾಗೂ 2022ರ ಜುಲೈನಿಂದ ಹಲವು ವಸ್ತುಗಳಿಗೆ ನೀಡುತ್ತಿದ್ದ ತೆರಿಗೆ ವಿನಾಯತಿ ಕೈಬಿಟ್ಟಿರುವುದರಿಂದಾಗಿ ವರಮಾನ ಸಂಗ್ರಹ ಹೆಚ್ಚಾಗಿದೆ' ಎಂದು ಎನ್.ಎ. ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್‌ಮೆಹ್ತಾ ಹೇಳಿದ್ದಾರೆ.

'ಹಬ್ಬದ ಋತುವಿನಲ್ಲಿ ಎಲ್ಲಾ ವಹಿವಾಟುಗಳಿಗಳಲ್ಲಿಯೂ ಖರೀದಿ ಚಟುವಟಿಕೆ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಮುಂಬರುವ ತಿಂಗಳುಗಳಲ್ಲಿ ಜಿಎಸ್‌ಟಿ ಸಂಗ್ರಹವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ಅಭಿಪ್ರಾಯಪಟ್ಟಿದ್ದಾರೆ.




| ವರಮಾನ ಸಂಗ್ರಹ (ಕೋಟಿಗಳಲ್ಲಿ) | |
|---|---|
| ಮಾರ್ಚ್ | ರೂ. 1,42,095 |
| ಏಪ್ರಿಲ್ | ರೂ. 1,67,540 |
| ಮೇ | ರೂ. 1,40,885 |
| ಜೂನ್ | ರೂ. 1,44,616 |
| ಜುಲೈ | ರೂ. 1,48,995 |
| ಆಗಸ್ಟ್ | ರೂ. 1,43,612 |


## ರೆಪೊ ದರ ಏರಿಕೆಯ ಪರಿಣಾಮ ಅಸ್ಪಷ್ಟ : ಜೆ.ಆರ್. ವರ್ಮಾ

**ಮುಂಬೈ** : ಹಣದುಬ್ಬರ ನಿಯಂತ್ರಿಸಲು ರಿಸರ್ವ್‌ಬ್ಯಾಂಕ್(ಆರ್‌ಬಿಐ) ಈಚೆಗೆ ಮಾಡಿರುವ ರೆಪೊ ದರ ಏರಿಕೆಯು ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಆರ್‌ಬಿಐ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯ ಜೆ.ಆರ್. ವರ್ಮಾ ಹೇಳಿದ್ದಾರೆ. ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಬಡ್ಡಿದರ ಹೊಂದಾಣಿಕೆಯ ಪ್ರಮಾಣವು ನಿರ್ಧಾರವಾಗಲಿದೆ ಎಂದೂ ಅವರು ತಿಳಿಸಿದ್ದಾರೆ.

'ಆರ್ಥಿಕ ಬೆಳವಣಿಗೆಯು ಉತ್ತಮವಾಗಿದ್ದರೆ, ಹಣದುಬ್ಬರವನ್ನು ಶೇ 4ಕ್ಕೆ ಇಳಿಕೆ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಆರ್ಥಿಕತೆಯು ಬೆಳವಣಿಗೆ ಸಾಧಿಸಲು ಹೆಣಗಾಡುತ್ತಿದ್ದಲ್ಲಿ ಬಡ್ಡಿದರದಲ್ಲಿ ನಿಧಾನಗತಿಯ ಹೊಂದಾಣಿಕೆಯ ಸಾಕಾಗುತ್ತದೆ' ಎಂದು ಅವರು ಹೇಳಿದ್ದಾರೆ. ಆರ್‌ಬಿಐ ಆಗಸ್ಟ್‌ತಿಂಗಳಿನಲ್ಲಿ ರೆಪೊ ದರವನ್ನು ಶೇ 0.50ರಷ್ಟು ಹೆಚ್ಚಿಸಿದೆ. ಇದರಿಂದಾಗಿ ಮೇ ತಿಂಗಳಿನಿಂದ ಆಗಸ್ಟ್‌ವರೆಗೆ ರೆಪೊ ದರವು ಒಟ್ಟಾರೆ ಶೇ 1.40ರಷ್ಟು ಹೆಚ್ಚಾಗಿದೆ. ಸೆಪ್ಟೆಂಬರ್30ರಂದು ಆರ್‌ಬಿಐ ರೆಪೊ ದರವನ್ನು ಮತ್ತೆ ಶೇ 0.50ರಷ್ಟು ಹೆಚ್ಚಿಸುವ ನಿರೀಕ್ಷೆ ಮಾಡಲಾಗಿದೆ. 'ನಗದು ಲಭ್ಯತೆಯನ್ನು ನಿಯಂತ್ರಿಸಲು ಬ್ಯಾಂಕ್‌ಗಳ ಮಧ್ಯೆ ವಿತರಿಸುವ ಅಲ್ಪಾವಧಿಯ ಸಾಲದ ಬಡ್ಡಿದರವನ್ನು ಗರಿಷ್ಠ ಮಟ್ಟದಲ್ಲಿ ಇಡಲಾಗಿದೆ. ಹೀಗಾಗಿ ಬಡ್ಡಿದರ ಏರಿಕೆಯು ನಿಜವಾಗಿಯೂ ಶೇ 1.40ರಷ್ಟು ಅಲ್ಲ, ಬದಲಾಗಿ ಶೇ 2.05ರಷ್ಟು ಹೆಚ್ಚಾಗಿದೆ' ಎಂದು ಅವರು ವಿವರಿಸಿದ್ದಾರೆ. 'ಸದ್ಯ ನಾವು ಗರಿಷ್ಠ ಹಣದುಬ್ಬರ ಮತ್ತು ಮಂದಗತಿಯ ಆರ್ಥಿಕ ಬೆಳವಣಿಗೆಯ ಸ್ಥಿತಿಯಲ್ಲಿ ಇದ್ದೇವೆ. ಹೀಗಾಗಿ ನೈಜ ಬಡ್ಡಿದರವು 'ತಟಸ್ಥ ದರ'ಕ್ಕಿಂತಲೂ (ಶೇ 6 ರಿಂದ ಶೇ 6.25ರವರೆಗೆ) ತುಸು ಹೆಚ್ಚಿನ ಮಟ್ಟದಲ್ಲಿ ಇರಲಿದೆ. ನೈಜ ಬಡ್ಡಿದರವನ್ನು ಹಾಲಿ ಇರುವ ಹಣದುಬ್ಬರದ ಪ್ರಮಾಣದ ಆಧಾರದ ಮೇಲೆ ಅಂದಾಜು ಮಾಡುವುದಕ್ಕೆ ಬದಲಾಗಿ ಮೂರರಿಂದ ನಾಲ್ಕು ತ್ರೈಮಾಸಿಕಗಳ ಹಣದುಬ್ಬರವನ್ನು ಒಟ್ಟುಗೂಡಿಸಿ ಅಂದಾಜು ಮಾಡಬೇಕಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

ಆರ್‌ಬಿಐಗೆ ಬಡ್ಡಿದರ ಏರಿಸಲು ಅವಕಾಶ ಇದೆಯಾದರೂ ಬಹುಶಃ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಮಾಡಲು ಅಲ್ಲ ಎಂದು ಹೇಳಿದ್ದಾರೆ. 'ಶೇ 5ಕ್ಕೆ ಇಳಿಯಲಿದೆ ಹಣದುಬ್ಬರ' ಹಣದುಬ್ಬರವು ಮುಂದಿನ ವರ್ಷದ ಏಪ್ರಿಲ್–ಜೂನ್‌ತ್ರೈಮಾಸಿಕದಲ್ಲಿ ಶೇ 5ರ ಆಸುಪಾಸಿಗೆ ಇಳಿಕೆ ಕಾಣುವ ನಿರೀಕ್ಷೆ ಇದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್‌ದಾಸ್‌ಜೀ ಬಿಸಿನೆಸ್‌ಟಿ.ವಿ.ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಚಿಲ್ಲರೆ ಹಣದುಬ್ಬರವು ಹಲವು ತಿಂಗಳುಗಳಿಂದ ಶೇ 6ರ ಮಟ್ಟಕ್ಕಿಂತಲೂ ಹೆಚ್ಚಿಗೆ ಇದೆ. ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ 6.71ರಷ್ಟಾಗಿದೆ. ಆರ್ಥಿಕ ಬೆಳವಣಿಗೆಯ ಮೇಲೆ ಹೆಚ್ಚಿನ ಪರಿಣಾಮ ಆಗದೇ ಇರುವ ರೀತಿಯಲ್ಲಿ ಹಣದುಬ್ಬರವನ್ನು ನಿಯಂತ್ರಿಸಲು ಹಣಕಾಸು ನೀತಿಯ ಗಮನ ಹರಿಸಲಿದೆ ಎಂದೂ ಅವರು ಹೇಳಿದ್ದಾರೆ.

# ಸಹಕಾರ ಸಂಘ ಸುಧಾರಣೆಗೆ ಅಮಿತ್ ಶಾ ಕರೆ



**ನವದೆಹಲಿ :** ಸಹಕಾರ ಸಂಘಗಳಲ್ಲಿ ಚುನಾವಣಾ ಪ್ರಕ್ರಿಯೆಯು ಹೆಚ್ಚು ಪಾರದರ್ಶಕವಾಗಬೇಕು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. 'ಒಬ್ಬನೇ ವ್ಯಕ್ತಿ ಪ್ರತಿ ಆಡಳಿಮಂಡಳಿಗೆ ಚುನಾಯಿತನಾಗುವ ವ್ಯವಸ್ಥೆ ಸರಿಯಲ್ಲ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಸಹಕಾರ ಕ್ಷೇತ್ರದಲ್ಲಿ ಬಹಳ ವೇಗವಾಗಿ ಬದಲಾವಣೆ ತರುವ ಅಗತ್ಯವಿದೆ. ನಾವು ಬದಲಾಗದಿದ್ದರೆ ಜನರೇ ನಮ್ಮನ್ನು ಬದಲಾಯಿಸುತ್ತಾರೆ' ಎಂದು ಅವರು ಹೇಳಿದ್ದಾರೆ.

'ಚುನಾವಣಾ ಪ್ರಕ್ರಿಯೆಯು ಪಾರದರ್ಶಕ ಆಗಬೇಕು. ನಾವು ಬದಲಾವಣೆ ತರಲು ಬಯಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ. ಸಹಕಾರ ಸಂಘಗಳಿಗೆ ಪಾರದರ್ಶಕವಾಗಿ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗದ ಮಾದರಿಯಲ್ಲಿ ವ್ಯವಸ್ಥೆಯೊಂದನ್ನು ರೂಪಿಸಲಾಗುವುದು ಎಂದಿದ್ದಾರೆ. ಅಮಿತ್ ಶಾ ಅವರು ತಾವು ಕೂಡ 25 ವರ್ಷಗಳಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವೊಂದಕ್ಕೆ ಅಧ್ಯಕ್ಷರಾಗಿದ್ದು ಅಲ್ಲಿ ಈ ವರ್ಷ ಬದಲಾವಣೆ ಆಗಲಿದೆ ಎಂದಿದ್ದಾರೆ. ಸಹಕಾರ ಕ್ಷೇತ್ರದಲ್ಲಿನ ನೇಮಕಾತಿ ವ್ಯವಸ್ಥೆಯಲ್ಲಿ ಕೂಡ ಬದಲಾವಣೆ ತರಬೇಕಾದ ಅಗತ್ಯ ಇದೆ. ಸಚಿವಾಲಯವು ಅದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುತ್ತಿದೆ ಎಂದಿದ್ದಾರೆ.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ-ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org


## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-Reg No. : KARKAN/2018/75796
Post Reg No. : KA-BGW/1816/2022-2024
License to post without prepayment
PMG BG/WPP-405/2022-2024
Posting Date : 1 & 5, Every Month
Posted at : Patrika Chanel RMS Bhavan, Bangalore PSO,
Blore - 26, Published on : 31th of Previouse Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ




ಶಿದ್ದನಗೌಡ ಸಂಣರಾಮನಗೌಡ
ಸಹಕಾರಿ ಪಿತಾಮಹ, ರಾಷ್ಟ್ರದ ಪ್ರಥಮ
ಕೃಷಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕರು



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಶ್ರೀ ವಿ. ರಾಜು
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.
mobile: 9738380945

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

# ಸರ್ವ ಸದಸ್ಯರ ಸಭೆ ಭೌತಿಕ / ವರ್ಚುಯಲ್‌ಗೆ ಅವಕಾಶ

ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಮಹಾಮಾರಿಯಿಂದ ಬಹುತೇಕ ಸಹಕಾರ ಸಂಘಗಳು ವರ್ಚುವಲ್ ಮೂಲಕ ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ಆಯೋಜಿಸಿದ್ದವು. 2022ರ ವರ್ಷದಲ್ಲಿ ಕೊರೊನಾ ಸೋಂಕು ತೀವ್ರ ಇಳಿಕೆಯಾಗಿದ್ದರೂ, ಮುನ್ನೆಚ್ಚರಿಕೆಯ ಕಾರಣಗಳಿಂದ ಹೆಚ್ಚಿನ ಸಂಖ್ಯೆಯ ಸಹಕಾರ ಸಂಘಗಳು ಈ ವರ್ಷವೂ ವರ್ಚುವಲ್ ಮೂಲಕವೇ ವಾರ್ಷಿಕ ಮಹಾಸಭೆಗಳನ್ನು ನಡೆಸಲು ನಿಬಂಧಕರ ಅನುಮತಿ ಕೋರಿವೆ. ಈ ಬಗ್ಗೆ ಸಹಕಾರ ಇಲಾಖೆ ಸ್ಪಂದಿಸಿ ಹೆಚ್ಚಿನ ಸಂಖ್ಯೆಯ ಸದಸ್ಯರು ಭಾಗವಹಿಸಲು ಸೆಪ್ಟೆಂಬರ್ 25ನೇ ತಾರೀಖಿನ ಒಳಗೆ ಅವಕಾಶ ಕಲ್ಪಿಸಿ ಆದೇಶ ಹೊರಡಿಸಿದೆ.

ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಸಹಕಾರ ಸಂಘಗಳಲ್ಲಿ ಒಂದು ಸಾವಿರಕ್ಕಿಂತ ಕಡಿಮೆ ಇದ್ದಲ್ಲಿ ಭೌತಿಕವಾಗಿ, ಹೆಚ್ಚಿನ ಸಂಖ್ಯೆಯ ಸದಸ್ಯರಿದ್ದಲ್ಲಿ ಭೌತಿಕವಾಗಿ ವರ್ಚುವಲ್ ಮೀಟಿಂಗ್‌ಗೆ ಅವಕಾಶ ನೀಡಲಾಗಿದ್ದು ಹಲವು ಷರತ್ತುಗಳನ್ನು ಸಹ ವಿಧಿಸಲಾಗಿದೆ.

ಇದು ಸ್ವಾಗತಾರ್ಹ ವಿಚಾರವೂ ಆಗಿದೆ. ಸಂಘಗಳ ಸದಸ್ಯರಲ್ಲಿ ವಯೋವೃದ್ಧರು, ಅನಾರೋಗ್ಯ ಕಾರಣಗಳಿಂದ ಭೌತಿಕವಾಗಿ ಭಾಗವಹಿಸಲು ಸಾಧ್ಯವಾಗದವರಿಗೆ ತಾವಿರುವಲ್ಲಿಯೇ ತಂತ್ರಜ್ಞಾನ/ ಮೊಬೈಲ್ ಬಳಕೆಯಿಂದ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿದೆ.

ಎರಡು ವರ್ಷಗಳ ಅವಧಿಯಲ್ಲಿ ಸಹಕಾರ ಸಂಘಗಳ ವ್ಯವಹಾರಗಳ ಏರು-ಪೇರು ಕಂಡು ಬಂದಿರುವುದಂತೂ ನಿಜ ಸಂಗತಿ. ಭವಿಷ್ಯದ ದೃಷ್ಟಿಯಿಂದ ಸಹಕಾರ ಸಂಘಗಳು ಗುರಿ-ಸಾಧನೆಗಳ ಜೊತೆಗೆ ಸದಸ್ಯರಲ್ಲಿ ಸಾಲ ನೀಡಿಕೆ-ಮರುಪಾವತಿ ಹಾಗೂ ಇತರೆ ಸೇವೆಗಳ ಬಗ್ಗೆ ಹಾಗೂ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಬೇಕಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸಹಕಾರ ಸಂಘಗಳು ಸಾಮಾಜಿಕ ಕಳಕಳಿ ಮೂಲಕ ಸಂಘಗಳ ಸದಸ್ಯರಿಗೆ ಸಾರ್ವಜನಿಕರಿಗೆ ವಿವಿಧ ರೀತಿಯ ನೆರವನ್ನು ನೀಡಿ ಸಾಮಾಜಿಕ ಕಳಕಳಿಯನ್ನು ತೋರಿ ಸಹಕಾರ ತತ್ವಗಳನ್ನು ಪಾಲಿಸಿರುವುದು ಸಂತಸದ ವಿಚಾರವಾಗಿದೆ.

ಮುಂಬರುವ ದಿನಗಳಲ್ಲಿ ಸಂಘಗಳು ಹೆಚ್ಚು ವ್ಯವಹಾರಗಳನ್ನು ನಡೆಸುವ ಮೂಲಕ ತಮ್ಮ ಸೇವೆಗಳನ್ನು ವಿಸ್ತರಿಸಿಕೊಳ್ಳಲಿ ಎಂದು ಆಶಿಸುತ್ತೇನೆ.

ಎರಡು ವರ್ಷಗಳ ಅವಧಿಯಲ್ಲಿ ಸಹಕಾರ ಸಂಘಗಳ ವ್ಯವಹಾರಗಳಲ್ಲಿ ಏರು-ಪೇರು ಕಂಡು ಬಂದಿರುವುದಂತೂ ನಿಜ ಸಂಗತಿ. ಭವಿಷ್ಯದ ದೃಷ್ಟಿಯಿಂದ ಸಹಕಾರ ಸಂಘಗಳು ಗುರಿ-ಸಾಧನೆಗಳ ಜೊತೆಗೆ ಸದಸ್ಯರಲ್ಲಿ ಸಾಲ ನೀಡಿಕೆ-ಮರುಪಾವತಿ ಹಾಗೂ ಇತರೆ ಸೇವೆಗಳ ಬಗ್ಗೆ ಹಾಗೂ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಬೇಕಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸಹಕಾರ ಸಂಘಗಳು ಸಾಮಾಜಿಕ ಕಳಕಳಿ ಮೂಲಕ ಸಂಘಗಳ ಸದಸ್ಯರಿಗೆ ಸಾರ್ವಜನಿಕರಿಗೆ ವಿವಿಧ ರೀತಿಯ ನೆರವನ್ನು ನೀಡಿ ಸಾಮಾಜಿಕ ಕಳಕಳಿಯನ್ನು ತೋರಿ ಸಹಕಾರ ತತ್ವಗಳನ್ನು ಪಾಲಿಸಿರುವುದು ಸಂತಸದ ವಿಚಾರವಾಗಿದೆ.



ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಅಭಿವೃದ್ಧಿಯ ಪೋಷಣೆಗೆ ರಾಜ್ಯದ ಪಂಚ ಮಾರ್ಗಗಳ ಘೋಷಣೆ
# ನವಕರ್ನಾಟಕ ನಿರ್ಮಾಣದ ಶಪಥ : ಬಸವರಾಜ ಬೊಮ್ಮಾಯಿ



**ಬೆಂಗಳೂರು** : ಎಪ್ಪತ್ತೈದನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಸಂಕಲ್ಪ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನವಕರ್ನಾಟಕ ನಿರ್ಮಾಣ ಮಾಡುವ ಶಪಥ ಮಾಡಿದ್ದಾರೆ.

ಕರುನಾಡಿನ ಜನರಿಗೆ ಅಮೃತ ಯೋಜನೆಗಳನ್ನು ಘೋಷಿಸುವ ಮೂಲಕ ನಾಡಿನ ಜನರಿಗೆ ಕೊಡುಗೆ ನೀಡಿದ್ದಾರೆ. ಪ್ರಧಾನಿ ಮೋದಿ ಅವರ ಮಾರ್ಗದರ್ಶನದಲ್ಲಿ ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಗುರಿಯಲ್ಲಿ ಕರ್ನಾಟಕದಿಂದಲೇ ಕನಿಷ್ಠ ಒಂದು ಟ್ರಿಲಿಯನ್ ಡಾಲರ್ ಕೊಡುಗೆ ನೀಡುವ ಸಂಕಲ್ಪ ನಮ್ಮದು. ಈ ಗುರಿ ಸಾಧನೆಗೆ ಸರ್ಕಾರ ಎಲ್ಲ ರೀತಿಯ ಸರ್ವ ಪ್ರಯತ್ನ ಮಾಡಲಿದೆ ಎನ್ನುವ ಅಭಯ ನೀಡಿದರು.

75ನೇ ಸ್ವಾತಂತ್ರ್ಯ ದಿನೋತ್ಸವದ ಹಿನ್ನೆಲೆಯಲ್ಲಿ ನಗರದ ಮಾಣಿಕ್ ಷಾ ಪರೇಡ್‌ನಲ್ಲಿ ಧ್ವಜಾರೋಹಣ ನೆರವೇರಿಸಿ ರಾಜ್ಯದ ಜನತೆಗೆ ಸ್ವಾತಂತ್ರೋತ್ಸವದ ಶುಭಾಶಯ ಕೋರುವುದರೊಂದಿಗೆ ತಮ್ಮ ನೇತೃತ್ವದ ಸರ್ಕಾರ ಮುಂದೆ ಮಾಡಲಿರುವ ಯೋಜನೆಗಳ ಘೋಷಣೆಗಳನ್ನು ಪ್ರಕಟಿಸಿದರು.

**ಸುಭಾಷಿತ :** ನಿಮ್ಮ ಮನಸ್ಸು ಪರಿಶುದ್ಧವಾಗಿದ್ದರೆ, ನೆಮ್ಮದಿ ನೆರಳಿನಂತೆ ನಿಮ್ಮನ್ನು ಹಿಂಬಾಲಿಸುತ್ತದೆ. – ಗೌತಮ ಬುದ್ಧ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ಭವ್ಯ ಭಾರತದ ನಿರ್ಮಾಣಕ್ಕೆ ಪಂಚಪ್ರಾಣ ಶಪಥ

# 2047ಕ್ಕೆ ಅಭಿವೃದ್ಧಿ ದೇಶಗಳ ಸಾಲಿನಲ್ಲಿ ಭಾರತ : ಪ್ರಧಾನಿ ನರೇಂದ್ರ ಮೋದಿ

**ನವದೆಹಲಿ :** ಮುಂದಿನ 25 ವರ್ಷಗಳ ಹೊತ್ತಿಗೆ ಭಾರತ ಮುಂದುವರಿದ ದೇಶಗಳ ಪಟ್ಟಿಗೆ ಸೇರುವಂತೆ ಮಾಡಲು, ಯುವಕರು ಪಣತೊಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಐತಿಹಾಸಿಕ ಕೆಂಪುಕೋಟೆ ಮೇಲೆ ರಾಷ್ಟ್ರಧ್ವಜ ಹಾರಿಸಿ ಮಾತನಾಡುತ್ತಿದ್ದ ಅವರು, ದೊಡ್ಡ ಗುರಿಯನ್ನು ಮುಂದಿಟ್ಟುಕೊಂಡು, ಸ್ವಾತಂತ್ರ್ಯದ ಶತಮಾನೋತ್ಸವ ಆಚರಣೆ ವೇಳೆಗೆ ದೇಶವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಕನಸು ಸಾಕಾರಗೊಳಿಸಲು ಶ್ರಮಿಸಬೇಕು. ಇದಕ್ಕಾಗಿ ಪಂಚಪ್ರಾಣ ಶಪಥ ತೆಗೆದುಕೊಳ್ಳಬೇಕಾಗುತ್ತದೆ ಎಂದರು. ದೊಡ್ಡ ಗುರಿಯನ್ನಿಟ್ಟುಕೊಂಡು ಅದನ್ನು ಸಾಕಾರಗೊಳಿಸಲು ಯತ್ನಿಸುವುದು, ನಮ್ಮ ಪರಂಪರೆ ಬಗ್ಗೆ ಹೆಮ್ಮೆ ಪಡುವುದು, ನಮ್ಮ ಒಗ್ಗಟ್ಟನ್ನು ಬಲಗೊಳಿಸುವುದು, ದೇಶದ ಪ್ರಜೆಗಳಾಗಿ ಕರ್ತವ್ಯ ಪೂರೈಸುವುದು. ಇವುಗಳಿಂದ ಸ್ವಾತಂತ್ರ್ಯ ಹೋರಾಟಗಾರರು ಕಂಡ ಕನಸು ನನಸಾಗುತ್ತವೆ ಎಂದರು.

ನೈಸರ್ಗಿಕ ಕೃಷಿ ಭಾರತಕ್ಕೆ ಹೊಸ ಶಕ್ತಿಯನ್ನು ನೀಡುತ್ತಿದೆ. ಭಾರತದ ಕೈಗಾರಿಕಾ ಬೆಳವಣಿಗೆಯು ತಳಮಟ್ಟದಿಂದ ಆಗಬೇಕಾಗಿದೆ. ನಮ್ಮ ಎಂಎಸ್‌ಎಂಇಗಳು, ಬೀದಿ ಬದಿ ವ್ಯಾಪಾರಿಗಳು ಮತ್ತು ಸಂಘಟಿತ ವಲಯದಲ್ಲಿರುವವರನ್ನು ಬಲಪಡಿಸಬೇಕಾಗಿದೆ. ಆತ್ಮನಿರ್ಭರ ಭಾರತಕ್ಕೆ ಒತ್ತು ನೀಡಬೇಕು. 'ಆತ್ಮನಿರ್ಭರ ಭಾರತ' ನಮ್ಮಲ್ಲಿ ರಕ್ತಗತವಾಗಿದೆ. ಈ ಕಲ್ಪನೆಯನ್ನು ಜನಾಂದೋಲನದಂತೆ ಮುಂದುವರಿಸಿಕೊಂಡು ಹೋಗುವ ಅಗತ್ಯವಿದೆ ಎಂದರು.

ಇಡೀ ವಿಶ್ವ ಭಾರತದ ಕಡೆಗೆ ಹೆಮ್ಮೆಯಿಂದ ಮತ್ತು ಭರವಸೆಯಿಂದ ನೋಡುತ್ತಿದೆ. ತಂತ್ರಜ್ಞಾನವನ್ನು ಉಲ್ಲೇಖಿಸಿದ ಅವರು, ಇಷ್ಟರಲ್ಲಿಯೇ 5ಜಿ ಸೇವೆ ಜನರಿಗೆ ಲಭ್ಯವಾಗಲಿದೆ ಎಂದರು.

**ಜೈ ಅನುಸಂಧಾನ್ :** ದೇಶದ ಅತ್ಯಂತ ಜನಪ್ರಿಯ ಘೋಷಣೆಯಾಗಿರುವ "ಜೈ ಜವಾನ್, ಜೈ ಕಿಸಾನ್" ಹಾಗೂ "ಜೈ ವಿಜ್ಞಾನ್ ಜೈ ಅನುಸಂಧಾನ್" ಎನ್ನುವ ಘೋಷಣೆಯನ್ನು ಸೇರಿಸಿದರು. ಈ ಮೂಲಕ ಅನ್ವೇಷಣೆ ಮತ್ತು ತಂತ್ರಜ್ಞಾನಕ್ಕೆ ಒತ್ತು ನೀಡಿದರು. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜೈ ಜವಾನ್, ಜೈ ಕಿಸಾನ್ ಘೋಷಣೆಯನ್ನು ನೀಡಿದ್ದರು. ಬಳಿಕ ಅಟಲ್ ಬಿಹಾರಿ ವಾಜಪೇಯಿ ಈ ಘೋಷಣೆಗೆ ಜೈ ವಿಜ್ಞಾನ್ ಘೋಷಣೆಯನ್ನು ಸೇರಿಸಿದ್ದರು. ಈಗ ಪ್ರಧಾನಿ ನರೇಂದ್ರ ಮೋದಿ ಕೆಂಪುಕೋಟೆಯಿಂದಲೇ ಈ ಘೋಷಣೆಗೆ "ಜೈ ಅನುಸಂಧಾನ್" ಘೋಷಣೆಯನ್ನು ಸೇರಿಸಿದ್ದಾರೆ. ಅನುಸಂಧಾನ್ ಎಂದರೆ ತಂತ್ರಜ್ಞಾನ ಎಂದರ್ಥ.



### ಗೌರವ ಸಲ್ಲಿಕೆ

ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ ಅವರಿಗೆ ಶ್ರೀ ರಾಮಾನುಜ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂದರ್ಭದಲ್ಲಿ ಸಂಘದ ಗೌರವ ಸ್ವೀಕರಿಸಿದರು.




## ಶ್ರೀ ವಿ. ರಾಜು ಅವರಿಗೆ 2022ನೇ ಸಾಲಿನ ಪ್ರತಿಷ್ಠಿತ ಡಿ.ದೇವರಾಜು ಅರಸ್ ಪ್ರಶಸ್ತಿ ಪ್ರದಾನ



ಮಹಾಮಂಡಳದ ನಿರ್ದೇಶಕರಾದ ಶ್ರೀ ವಿ.ರಾಜು ಅವರಿಗೆ ಕರ್ನಾಟಕ ಸರ್ಕಾರವು ಪ್ರತಿಷ್ಠಾಪಿಸಿರುವ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಜಿಲ್ಲಾಡಳಿತವು ಗುರುತಿಸಿ, 2022ನೇ ಸಾಲಿನ ಪ್ರತಿಷ್ಠಿತ ಡಿ.ದೇವರಾಜು ಅರಸ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

### ಆಯ್ಕೆ



ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಗುರುಪಾದಪ್ಪಗೌಡ ಬ ಪಾಟೀಲರವರು ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ., ಬೆಂಗಳೂರು ಇದರ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

### ಬಿ.ಡಿ. ಭೂಕಾಂತವರಿಗೆ "ಭಾರತ ಸೇವಾ ರತ್ನ ಪ್ರಶಸ್ತಿ" ಪ್ರದಾನ

ಬೆಂಗಳೂರಿನ ಸ್ವಾನ್ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಂಸ್ಥೆ, ಆಡಿಗ ಆರ್ಟ್ಸ್ ಅಕಾಡೆಮಿ ಹಾಗೂ ವಿ. ನಾಗರಾಜು ಪ್ರತಿಷ್ಠಾನ (ರಿ) ವತಿಯಿಂದ ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಡಿ.ಭೂಕಾಂತವರಿಗೆ "ಭಾರತ ಸೇವಾ ರತ್ನ ಪ್ರಶಸ್ತಿ"ಯನ್ನು ನೀಡಿ ಸನ್ಮಾನಿಸಲಾಯಿತು.



# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಸಹಕಾರ ಸಂಘಗಳ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ 2021–22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಭೌತಿಕವಾಗಿ/ virtual Meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು.**

**ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಯುಬಿಸಿ–2/19/ವಾರ್ಷಿಕ ಮಹಾಸಭೆ/2022–23 ದಿನಾಂಕ : 19.08.2022.**

## ಪ್ರಸ್ತಾವನೆ

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಕೋವಿಡ್–19ರ ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ ಹಾಗೂ ಹಲವಾರು ಸಹಕಾರ ಸಂಘಗಳ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಸದಸ್ಯರು ಹಿರಿಯ ನಾಗರೀಕರಾಗಿದ್ದು ಇವರುಗಳ ಆರೋಗ್ಯದ ಹಿತದೃಷ್ಟಿಯಿಂದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು virtual Meeting ಮೂಲಕ ನಡೆಸಲು ಅನುಮತಿ ನೀಡುವ ಸಂಬಂಧ ಹಲವು ಸಹಕಾರ ಸಂಘಗಳಿಂದ ಮನವಿ/ಕೋರಿಕೆಗಳು ಸ್ವೀಕೃತವಾಗಿರುವುದರಿಂದ ಸಹಕಾರ ಸಂಘ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ 2021–22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಗಳನ್ನು virtual Meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು, 2021–22ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು virtual Meeting ಮೂಲಕ ನಡೆಸಲು ಅನುಮತಿ ನೀಡುವ ಸಂಬಂಧ ಸರ್ಕಾರಕ್ಕೂ ಸಹ ಗಣ್ಯ ವ್ಯಕ್ತಿಗಳಿಂದ ಹಾಗೂ ಸಹಕಾರಿಗಳಿಂದ ಮನವಿಗಳು ಸ್ವೀಕೃತವಾಗಿರುತ್ತವೆ.

ಪರಿಶೀಲಿಸಲಾಗಿ ಸಹಕಾರ ಸಂಘ/ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಹಿರಿಯ ನಾಗರೀಕರಿದ್ದು, ಇವರುಗಳ ಆರೋಗ್ಯದ ಹಿತದೃಷ್ಟಿಯಿಂಧ ಹಾಗೂ ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ಪ್ರಸ್ತುತ ಏರಿಕೆಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವೆಂದು ಹಾಗೂ virtual Meeting ನಲ್ಲಿ ಹೆಚ್ಚಿನ ಸದಸ್ಯರು ಭಾಗವಹಿಸಲು ಅವಕಾಶವಾಗುವುದನ್ನು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಇ69 ಸಿಎಲ್ಎಮ್2022(ಇ).**

**ಬೆಂಗಳೂರು, ದಿನಾಂಕ: 25.08.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ವಯ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ಸಾವಿರಕ್ಕಿಂತ ಕಡಿಮೆ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳು/ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಕಡ್ಡಾಯವಾಗಿ ಭೌತಿಕ ಹಾಜರಾತಿಯೊಂದಿಗೆ ನಡೆಸಲು ಸೂಚಿಸಿದೆ.

ಮುಂದುವರೆದು, ಒಂದು ಸಾವಿರಕ್ಕಿಂತ ಹೆಚ್ಚಿನ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳು/ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ಸರ್ವಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಭೌತಿಕವಾಗಿ ನಡೆಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ Virtual Meeting ವಿಧಾನವನ್ನು ಅನುಸರಿಸಿ ಈ ಕೆಳಕಂಡ ನಿಬಂಧನೆಗೊಳಪಟ್ಟು ನಡೆಸಲು ಅನುಮತಿ ನೀಡಿ ಆದೇಶಿಸಿದೆ.

- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಇಂತಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್–19ರ ನಿಯಮಾವಳಿಗಳಿಗೆ ಒಳಪಟ್ಟು ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಅಧಿನಿಯಮಗಳನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡೆಸಲು ಕ್ರಮವಹಿಸತಕ್ಕದ್ದು.
- ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ/ಹೊರಡಿಸಿರುವ ಕೋವಿಡ್–19 ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎ.ಸಿ.ದಿವಾಕರ್)**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.



# ಸಹಕಾರ ಸಂಘಗಳಲ್ಲಿ 'ಸಾಮಾನ್ಯ ನಿಕಾಯ' ಸಭೆಯ ಪ್ರಾಮುಖ್ಯತೆ

▸▸ **ಶಶಿಧರ ಎಲೆ,** ನಿವೃತ್ತ ಅಪರ ನಿಬಂಧಕರು

'ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು' ಅದರಂತೆ ಪ್ರಜಾಸತ್ತಾತ್ಮಕ ಸಂಸ್ಥೆಗಳಾದ ಸಹಕಾರ ಸಂಘಗಳಲ್ಲಿ ಸದಸ್ಯರೇ 'ಪ್ರಭುಗಳು' 'ಸಹಕಾರ ಸಂಘ ಎಂದರೆ ವ್ಯಕ್ತಿಗಳು ಸ್ವಯಂ ಪ್ರೇರಣೆಯಿಂದ ಒಟ್ಟಿಗೆ ಸೇರಿ ತಮ್ಮ ಸಾಮಾನ್ಯ, ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಅವಶ್ಯಕತೆಗಳ ಅಕಾಂಕ್ಷೆಗಳ ಪೂರೈಕೆಗಾಗಿ ರಚಿಸಿಕೊಂಡ ಸಮೂಹ ಒಡೆತನವುಳ್ಳ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಒಳಗೊಂಡ ಸ್ವಾಯತ್ತ ಓದ್ಯೋಗಿಕ ಸಂಸ್ಥೆ", ಆದುದರಿಂದ ಎಲ್ಲ ಸದಸ್ಯರೂ ಸಹಕಾರ ಸಂಘದ ಆಡಳಿತ/ ವ್ಯವಸ್ಥಾಪನೆ ನಡೆಸಲು ಸಾಧ್ಯವಿಲ್ಲದಿರುವುದರಿಂದ ಅದರ ಆಡಳಿತ/ ವ್ಯವಸ್ಥಾಪನೆಯ ಚುಕ್ಕಾಣಿ/ಜವಾಬ್ದಾರಿಯನ್ನು ಅವರಿಂದ ಚುನಾಯಿತ ಆಡಳಿತಮಂಡಳಿಯಲ್ಲಿರಿಸಿದೆ. ಆಡಳಿತಮಂಡಳಿ ತನ್ನ ಹೊಣೆಗಾರಿಕೆ/ ಜವಾಬ್ದಾರಿಯನ್ನು, ಸದಸ್ಯರ ಅವಶ್ಯಕತೆಗಳ, ಆಸೆ, ಆಕಾಂಕ್ಷೆ ನಿರೀಕ್ಷೆಗಳನ್ನು ಎಷ್ಟರಮಟ್ಟಿಗೆ ಪೂರೈಸಿದೆ ಎಂಬುದರ ಪರಿಶೀಲನೆ/ ಪರೀಕ್ಷೆಯೇ 'ಸಾಮಾನ್ಯ ನಿಕಾಯ ಸಭೆ' ಶಾಸನಬದ್ದವಾಗಿ ವಾರ್ಷಿಕವಾಗಿ ಒಮ್ಮೆ ಮತ್ತು ಅವಶ್ಯಕತೆಗಳನುಸಾರ ವಿಶೇಷವಾಗಿಯೂ ಈ ಸಭೆಯನ್ನು ನಡೆಸಬಹುದಾಗಿರುತ್ತದೆ.

**ಕೋವಿಡ್-19ರ ಪರಿಣಾಮವಾಗಿ ಕಳೆದ ಎರಡು ವರ್ಷಗಳು ವಾರ್ಷಿಕ ಸಾಮಾನ್ಯ ನಿಕಾಯ ಸಭೆಯನ್ನು ಆಲ್‌ಲೈನ್ ಮುಖಾಂತರ ಮತ್ತು ಸೆಪ್ಟಂಬರ್-25ರ ವಿಸ್ತೃತ ದಿನಾಂಕಗಳಂದು ಸಭೆಗಳನ್ನು ನಡೆಸಲಾಯಿತು. ವಿಶೇಷವಾಗಿ ಸರ್ಕಾರ ಇದಕ್ಕೆ ಅನುಮತಿ ನೀಡಿತ್ತು. ಈ ಸಭೆಗಳು ಶಾಸನಬದ್ದ ಅವಶ್ಯಕತೆಯನ್ನು ಪೂರೈಕೆ ಮಾಡಿದವು. ಇವು ಒಂದು ರೀತಿ ಔಪಚಾರಿಕವಾಗಿ ನಡೆದವೇ ವಿನಃ ಪರಿಣಾಮಕಾರಿಯಾಗಿತ್ತೇ ಎಂಬುದು ಪ್ರಶ್ನಾರ್ಹ.**

ಕೋವಿಡ್-19 ಪಿಡುಗು ನಿವಾರಣೆಯಾಗಿ ಒಂದು ಹಂತ ತಲುಪಿರುವ ಈ ಸಮಯದಲ್ಲಿ 2021-22ನೇ ಸಾಲಿನ ವಾರ್ಷಿಕ ಸಾಮಾನ್ಯ ನಿಕಾಯ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸುವುದು. ಸಹಕಾರ ಸಂಘಗಳ ಜವಾಬ್ದಾರಿಯಾಗಿರುತ್ತದೆ. ಅದರಂತೆ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ಸಭೆಯನ್ನು ಯಶಸ್ವಿ ಸಭೆಯನ್ನಾಗಿಸುವುದು ಸದಸ್ಯರ ಕರ್ತವ್ಯವಾಗಿರುತ್ತದೆ. ಸಹಕಾರ ಸಂಘದ ಆಡಳಿತ/ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳಲು ಇರುವ ಏಕೈಕ ನೇರ ಅವಕಾಶವಿರುವುದು ಈ ಸಭೆಯಲ್ಲಿ ತಾನು ಸಕ್ರಿಯವಾಗಿ ಭಾಗವಹಿಸುವುದು. ಸಕ್ರಿಯವಾಗಿ ಭಾಗವಹಿಸುವುದೇಂದರೆ ತಾನು ಆಯ್ಕೆ ಮಾಡಿದ ಆಡಳಿತಮಂಡಳಿಯ ಸಂಘದ ಕಾರ್ಯಾಚರಣೆಯ ಪರಿಶೀಲನೆ, ಜವಾಬ್ದಾರಿಯ ನಿರ್ವಹಣೆಯ ಪರಿಶೀಲನೆ, ಮುಂದಿನ ವರ್ಷದಲ್ಲಿ ನಡೆಸಬೇಕಾದ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಈ ದಿಸೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಕಾನೂನುಗಳು ರೂಪಿಸಲ್ಪಟ್ಟಿದೆ. ಸದಸ್ಯರ ಸಕ್ರಿಯ ಭಾಗವಹಿಸುವಿಕೆಗೆ ಇವುಗಳ ಅರಿವು ಸಂಘಗಳ ಲೆಕ್ಕಗಳ ತಿಳುವಳಿಕೆ ಅಗತ್ಯ. ಅಲ್ಪ ಪೂರ್ವ ತಯಾರಿಕೆಯೊಂದಿಗೆ ನೋಟೀಸಿನಲ್ಲಿನ ಕಾರ್ಯಕ್ರಮ ಪಟ್ಟಿ ಸೂಚನೆಗಳ ಅಭ್ಯಯಿಸುವಿಕೆಯಿಂದ ಅವುಗಳನ್ನು ಅನುಸರಿಸುವುದರಿಂದ ಸಕ್ರಿಯ ಭಾಗವಹಿಸುವಿಕೆ ಸಾಧ್ಯ. ಹೆಚ್ಚಿನ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದಲ್ಲಿ ಸಹಕಾರ ಸಂಘವು ಹೆಚ್ಚು ಯಶಸ್ವಿಯಾಗಿ ಕಾರ್ಯನಿರ್ವಹಿಸಬಲ್ಲದು.

'ಪ್ರಜೆಗಳೇ ಪ್ರಭುಗಳು' ಅಂತಯೇ 'ಸಾಮಾನ್ಯ ನಿಕಾಯ'ಕ್ಕೆ ಅಂತಿಮ ಅಧಿಕಾರ ಇರುವಂತಹುದು (ಕ.ರಾ.ಸಸಂ.ಕಾಯ್ದೆ ಕಲಂ.26) ಅಂತಿಮ ಅಧಿಕಾರ ಅಥವ ಸ್ವತಂತ್ರ ಎಂದು ಸ್ವೇಚ್ಛೆಯಿಂದ ವರ್ತಿಸಲಾಗದು. 'ಅಂತಿಮ ಅಧಿಕಾರ' ಕೆಲವೊಂದು ಮಿತಿಗಳಿಗೆ ಒಳಪಟ್ಟಿದೆ. ಉಪನಿಯಮ, ಕಾಯ್ದೆ, ನಿಯಮ (ಕಾನೂನು) ಸಹಕಾರ ತತ್ವಗಳು, ಲಾಭದಾಯಕ ವ್ಯವಹಾರಗಳು ಸರ್ವ ಸದಸ್ಯರ ಒಳಿತು, ಸಮಷ್ಠಿ ಪ್ರಜ್ಞೆ ಒಳಗೊಂಡಿರಬೇಕು. ಈ ಹಿನ್ನಲೆಯಲ್ಲಿ, 'ಸಾಮಾನ್ಯ ಸಭೆ' (General meeting) ಅಥವ ಸಾಮಾನ್ಯ ನಿಕಾಯ ಸಭೆ (General body meeting) ಮಹತ್ವದ ಸಭೆಯಾಗಿರುತ್ತದೆ. 97ನೇ ಸಂವಿಧಾನ ತಿದ್ದುಪಡಿ ಆಶಯದಂತೆ ಕ.ರಾ.ಸ.ಸಂ.ಗಳ ಕಾಯ್ದೆ ಕಲಂ.27 ತಿದ್ದುಪಡಿಯಾಗಿದ್ದು ಚರ್ಚಿಸಿ ನಿರ್ಣಯಿಸಬೇಕಾದ ವಿಷಯಗಳನ್ನು ವಿಸ್ತೃತಗೊಳಿಸಲಾಗಿದೆ. ಇದರ ಮೂಲಕ ಸಂವಿಧಾನದ ಆಶಯವು, ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಅವಶ್ಯವೂ ಆದ 'ಸದಸ್ಯ ಚಾಲಿತ' ಸಹಕಾರ ಸಂಘಗಳ (member driven co-operatives) ನಿರ್ಮಾಣ ಸಾಧ್ಯ.

ಕ.ರಾ.ಸ.ಸಂ.ಗಳ ಕಾಯ್ದೆ ಕಲಂ.27ರಲ್ಲಿ ಸಭೆಯಲ್ಲಿ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಗ್ಗೆ ವಿಸ್ತೃತವಾಗಿ ತಿಳಿಸಿದೆ. ಇದರ ವಿಧಿವಿಧಾನಗಳ ಬಗ್ಗೆ ನಿಯಮ (ಕಾನೂನು) ನಂ.14 ಎಜೆಯಲ್ಲಿ ಸವಿವರವಾಗಿ ತಿಳಿಸಲಾಗಿದೆ. ಕಲಂ.28ಸಿ(ಆರ್)ರಂತೆ ಸಭೆ ನಡೆಸುವ ಜವಾಬ್ದಾರಿ ಆಡಳಿತಮಂಡಳಿಯದ್ದಾಗಿರುತ್ತದೆ.

ಕ.ರಾ.ಸ.ಸಂ.ಗಳ ಕಾಯ್ದೆ ಕಲಂ27(1)ರಂತೆ ಪ್ರತಿ ಸಹಕಾರ ಸಂಘವು ಪ್ರತಿವರ್ಷ ಸೆಪ್ಟಂಬರ್ 25ರ ಒಳಗೆ ತಮ್ಮ ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಇದರ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ.

1. ಹಿಂದಿನ ವಾರ್ಷಿಕ ವರದಿಯ ಪರಿಗಣನೆ, ವಾರ್ಷಿಕ ವರದಿಯಲ್ಲಿ ಆಡಳಿತಮಂಡಳಿಗೆ ಕಲಂ.28(ಸಿ)ಯಲ್ಲಿ ನಿಗದಿ ಪಡಿಸಿರುವ ಪ್ರಮುಖ ಕರ್ತವ್ಯ ಜವಾಬ್ದಾರಿಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಒಳಗೊಂಡಿರಬೇಕೆಂದು ಆಶಿಸಲಾಗಿದೆ. ಸದಸ್ಯತ್ವ ಚಟುವಟಿಕೆಗಳು,

ಅವುಗಳ ಪ್ರಗತಿ, ಆರ್ಥಿಕ ಪ್ರಗತಿಗಳು, ಸಿಬ್ಬಂದಿ ಕಾರ್ಯಾಚರಣೆ ಇತರೆ ಪ್ರತಿಯೊಂದು ಅಂಶಗಳ ಬಗ್ಗೆ ಸದಸ್ಯರು ಅವಲೋಕನ ಮಾಡಿ ವಿಮರ್ಶಿಸಿ, ಸಕರಾತ್ಮಕವಾಗಿ ಪ್ರತಿಕ್ರಿಯಿಸಿ ಆಡಳಿತಮಂಡಳಿಗೆ ಲೋಪಗಳಿದ್ದಲ್ಲಿ ತಿಳಿಸಿ, ಸರಿಪಡಿಸುವ ಮಾರ್ಗೋಪಾಯಗಳನ್ನು ಸೂಚಿಸಬಹುದು. ಆಡಳಿತಮಂಡಳಿಯು ಸಲಹೆ ಸೂಚನೆಗಳನ್ನು ಪರಿಗಣಿಸಿ ಅಳವಡಿಸಿಕೊಳ್ಳುವುದರ ಮೂಲಕ ಸಂಘದ ಪ್ರಗತಿ ಸಾಧ್ಯವಾಗುತ್ತದೆ, ಇವುಗಳನ್ನು ಆರೋಪ (complaint) ಎಂದು ಪರಿಗಣಿಸುವ ಬದಲಾಗಿ ಇದು ಹಿಮ್ಮಾಹಿತಿ (feed back) ಎಂದು ಪರಿಗಣಿಸಬೇಕಾಗುತ್ತದೆ.

2. ಕಲಂ.63ರ ಅಡಿಯಲ್ಲಿ ಆಗಿರುವ ಹಿಂದಿನ ವರ್ಷದ ಲೆಕ್ಕಪರಿಶೋಧನೆ ವರದಿ, ವರದಿಯಲ್ಲಿ ತೋರಿಸಿರುವ ಲೋಪಗಳು, ನ್ಯೂನ್ಯತೆಗಳು, ಇವುಗಳನ್ನು ಸರಿಪಡಿಸಲು ಆಡಳಿತಮಂಡಳಿ ಕ್ರಮಗಳು ಇದರ ಬಗ್ಗೆ ಅನುಪಾಲನೆ. ಇದು ಸಾಮಾನ್ಯ ಸಭೆಯ ಬಹಳ ಪ್ರಮುಖ ಅಂಗ, ಕಾಯ್ದೆ ತಿದ್ದುಪಡಿಯಂತೆ ಪ್ರತಿ ಸಂಘವು ತಮ್ಮ ಲೆಕ್ಕಗಳನ್ನು ಆರ್ಥಿಕ ವರ್ಷ ಮುಗಿದ ಒಂದು ತಿಂಗಳ ಒಳಗಾಗಿ ಅಂತಿಮಗೊಳಿಸುವುದು, ಅಂತಿಮ ಲೆಕ್ಕಗಳನ್ನು ತನ್ನ ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಂಡಿರುವ ಲೆಕ್ಕಪರಿಶೋಧಕರಿಗೆ ಸಲ್ಲಿಸುವುದು. ಅವರಿಗೆ ಈ ಕಾರ್ಯನಿರ್ವಹಿಸಲು ನಿಗದಿಪಡಿಸಲು ಇರುವ ಅಂತಿಮ ಗಡುವು ಸೆಪ್ಟಂಬರ್ 1ನೇ ದಿನಾಂಕ, ಇದರಿಂದಾಗಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಬಾಕಿ ಉಳಿಯುವುದಿಲ್ಲ. ಆಯಾ ವರ್ಷದ ಲೆಕ್ಕಪರಿಶೋಧನೆ ವರದಿ ಮತ್ತು ಅನುಪಾಲನೆ (ಸರಿಪಡಿಸಲು ಆಡಳಿತಮಂಡಳಿಗೆ ಉಚಿತ ಸಲಹೆ ಸೂಚನೆ ಮಾರ್ಗದರ್ಶನ ನೀಡಲು ಸದಾವಕಾಶ ಸಾಮಾನ್ಯ ಸಭೆಯಾಗಿರುತ್ತದೆ.

3. ಸಂಸ್ಥೆಯ ಪರಿವೀಕ್ಷಣೆ, ವಿಚಾರಣೆ ಆಗಿದ್ದಲ್ಲಿ ಅದರ ವರದಿ, ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ, ಸದಸ್ಯರು ಅಧ್ಯಯನ ಮಾಡಿ ಆಡಳಿತಮಂಡಳಿಯು ಸಂಘವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಬಗ್ಗೆ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸಬಹುದು

4. ನಿವ್ವಳ ಲಾಭ ವಿಲೇವಾರಿ ಮೀಸಲು ನಿಧಿ (ಅಪದ್ದನ ನಿಧಿ)ಗಳ ಸೃಷ್ಠಿ (ಸದಸ್ಯರಿಗೆ ಅವರ ವ್ಯವಹಾರಕ್ಕೆ ಅನುಗುಣವಾಗಿ ಬೋನಸ್ ಹಂಚಿಕೆ ಉದಾ: ಹಾಲು.ಉ.ಸ.ಸಂ ಉಪನಿಯಮ ರೀತಿ) ಡಿವಿಡೆಂಡ್ (ಲಾಭಾಂಶ) ಹಂಚಿಕೆ ಈ ವಿಷಯ ಅತ್ಯಂತ ಪ್ರಮುಖ ವಿಷಯ, ಲಾಭವನ್ನು ಪೂರ್ವ ಹಂಚಿ ಭವಿಷ್ಯಕ್ಕೆ ಏನೂ ಇಲ್ಲದಂತೆ ಮಾಡಿಕೊಳ್ಳುವುದು ಜಾಣತನವಲ್ಲ. ಬದಲಿಗೆ ಸಂಘದ ಭವಿಷ್ಯಕ್ಕೆ ಮುಂದಿನ ಪೀಳಿಗೆಗೆ ಅನುಕೂಲಕರ, ಸಂಘದ ನಿಧಿಗಳ ವೆಚ್ಚಗಳ ತಗ್ಗಿಸುವಿಕೆ, ಸ್ಥಿರ ಆಸ್ತಿಗಳ ನಿರ್ಮಾಣಕ್ಕೆ ಹಾದಿ ನಿರ್ಮಾಣ ಮಾಡುವ ಬಗ್ಗೆ ಸದಸ್ಯರ ಆಲೋಚನೆಗಳು ಇರುವುದು ಶ್ರೇಯಸ್ಕರ

5. ಮುಂದಿನ ವರ್ಷದ ಆಯ–ವ್ಯಯ, ಚಟುವಟಿಕೆಗಳ ಪರಮಾರ್ಶೆ, ಈ ವಿಷಯದಲ್ಲಿ ರಚನಾತ್ಮಕ ಸಲಹೆಗಳು ಸಂಘದ ಪೂರಕ ಬೆಳವಣಿಗೆಗೆ ಸಹಾಯಕರ

6. ಉಪನಿಯಮಗಳ ತಿದ್ದುಪಡಿ, ಉದ್ದೇಶಿತ ತಿದ್ದುಪಡಿಗಳನ್ನು ಮತ್ತು ಕಾರಣಗಳನ್ನು ನೋಟಿಸ್‌ನೊಡನೆ ತಿಳಿಸಲಾಗಿರುತ್ತದೆ. ಸಂಘದ ಭವಿಷ್ಯದ ಕಾರ್ಯಾಚರಣೆ ದೃಷ್ಟಿಯಿಂದ, ಕಾಯ್ದೆ ಕಾನೂನು, ಅನುಗುಣವಾಗಿ ಸರಿಯಿದ್ದಲ್ಲಿ ಇದಕ್ಕೆ ಪರವಾಗಿ ನಿಲ್ಲುವುದು ಅಗತ್ಯ ಉಪನಿಯಮ ತಿದ್ದುಪಡಿಗೆ ಕನಿಷ್ಟ ಮತದಾನ ಹಕ್ಕುಳ್ಳ ಸದಸ್ಯರ ಮೂರನೇ ಎರಡರಷ್ಟು ಮತಗಳೊಂದಿಗೆ ಬೆಂಬಲ ದೊರೆಯಬೇಕು ಇದಲ್ಲದೇ ಆಡಳಿತಮಂಡಳಿ ಸದಸ್ಯರು ಸದಸ್ಯರಿಗೆ ಹೊಣೆಗಾರರು ಎಂಬುದನ್ನು ಓರೆಗೆ ಹಚ್ಚಲು (ಪರಿಶೀಲಿಸಲು) ಅನುವಾಗುವಂತೆ ಹಲವು ವಿಷಯಗಳನ್ನು ಕಾರ್ಯಸೂಚಿಯಲ್ಲಿ ಸೇರಿಸುವಂತೆ ಈ ಕಲಂನಲ್ಲಿ ಸೇರಿಸಲಾಗಿದೆ. ಅವು ನಿರ್ದೇಶಕರ, ಮುಖ್ಯಕಾರ್ಯನಿರ್ವಾಹಕರ ಹತ್ತಿರ ಸಂಬಂಧಿಗಳ ನೇಮಕಾತಿ ಪರಮಾರ್ಶೆ, ಸಿಬ್ಬಂದಿ ಪದಾಧಿಕಾರಿಗಳು, ನಿರ್ದೇಶಕರುಗಳಿಗೆ ನಡವಳಿಕೆ ನೀತಿ ಸಂಹಿತೆ ರೂಪಿಸುವುದು, ನಿರ್ದೇಶಕರು ಮತ್ತು ಸದಸ್ಯರು ಸಂಘದ ಸೇವೆಯನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಪರಿಶೀಲನೆ, ನಿರ್ದೇಶಕರು ಪಡೆದಿರುವ ಸಾಲಗಳು ಮತ್ತು ಸುಸ್ತಿಯಾಗಿರುವ ಬಗ್ಗೆ ಮತ್ತು ವಸೂಲಿಕ್ರಮಗಳ ಬಗ್ಗೆ ನಿರ್ದೇಶಕರಿಗೆ ಪಾವತಿಸಿರುವ ಪ್ರಯಾಣ ಭತ್ಯೆ ದಿನಭತ್ಯೆ ಇತರೆ ಪರಮಾರ್ಶೆ, ಲೆಕ್ಕಪರಿಶೋಧಕರ ನೇಮಕಾತಿ ಇನ್ನಿತರೆ ವಿಷಯಗಳನ್ನು ಒಳಗೊಳ್ಳುತ್ತದೆ. ಸಭೆಯು ಮುಂದೆ ಸಹಕಾರ ಸಂಘ ನಡೆಸಲು ಸಾಧ್ಯವಿಲ್ಲದಿದ್ದಲ್ಲಿ ಸಮಾಪನೆಗೂ ಶಿಫಾರಸ್ಸು ಮಾಡಬಹುದಾಗಿದೆ.

ಸಭೆಗೆ ಅವಶ್ಯ ಕನಿಷ್ಠ ಹಾಜರಾತಿ ಸಂಖ್ಯೆಯು ಕಲಂ.27 (4) ರಂತೆ ಮತದಾನ ಹಕ್ಕುಳ್ಳ ಸದಸ್ಯರ ಶೇ.10 ಅಥವ 1000 ಯಾವುದು ಕಡಿಮೆಯೋ ಅದು ಆಗಿರುತ್ತದೆ. ಇಲ್ಲಿ ಮತದಾನ ಹಕ್ಕುಳ್ಳ ಸದಸ್ಯರು ಎಂದರೆ ಕಲಂ.19ರಂತೆ ತಮ್ಮ ಹಕ್ಕು ಚಲಾಯಿಸುವ ಹಕ್ಕನ್ನು ಕಳೆದುಕೊಂಡಿರಬಾರದು ಎಂದರೆ ಸಂಘದ ಯಾವುದೇ ಭಾದ್ಯತೆಯನ್ನು ಉಳಿಸಿಕೊಂಡಿರಬಾರದು. ಕಲಂ.20ರಂತೆ ಸಭೆ ದಿನಾಂಕದಿಂದ ಒಂದು ವರ್ಷ ಹಿಂದೆ ಸದಸ್ಯರಾದವರು ಮಾತ್ರ ಹಕ್ಕು ಹೊಂದಿರುತ್ತಾರೆ. ತದನಂತರ ಸದಸ್ಯರಾದವರಿಗೆ ಮತದಾನದ ಹಕ್ಕು ಇರುವುದಿಲ್ಲ. ನಾಮಮಾತ್ರ, ಸಹ, ಸುಸ್ತಿದಾರರಿಗೆ ಮತದಾನದ ಹಕ್ಕು ಇರುವುದಿಲ್ಲ ಅಲ್ಲದೇ ಕ.ರಾ.ಸ.ಸಂ.ಗಳ ಕಾಯ್ದೆ 1959 ಕಲಂ. 20 (a-IV), (a-V), 07.10.2021 ರಂದು ತಿದ್ದುಪಡಿಯಾಗಿದ್ದು ಹೆಚ್ಚು ಸದಸ್ಯರು ಸಂಘದ ಕಲಾಪಗಳಲ್ಲಿ ಭಾಗವಹಿಸುವಂತೆ ಮಾಡಲು ಸರಳಗೊಳಿಸಲಾಗಿದೆ. ಅದರಂತೆ ಕಲಂ.20 (a-IV), ಕಳೆದ ಐದು ವರ್ಷಗಳಲ್ಲಿ ಕನಿಷ್ಠ ಎರಡು ಮಹಾಸಭೆಗಳಲ್ಲಿ ಭಾಗವಹಿಸದಿದ್ದಲ್ಲಿ ಕಲಂ.20 (a-V), ಕಳದೆ ಐದು ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಕನಿಷ್ಠ ಸೇವೆ ಸೌಲಭ್ಯ ಉಪನಿಯಮಗಳಲ್ಲಿ ತಿಳಿಸಿದಂತೆ ಯಪಯೋಗಿಸಿಕೊಳ್ಳದಿದ್ದಲ್ಲಿ ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ.

ಸಾಮಾನ್ಯ ನಿಕಾಯ ಸಭೆ/ಸಾಮಾನ್ಯ ಸಭೆ ಅತ್ಯಂತ ಮಹತ್ವಪೂರ್ಣವಾಗಿದ್ದು ಈ ಸಭೆಯಲ್ಲಿ ಹೆಚ್ಚು ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಬಲಗೊಳಿಸುವುದು ಈ ದಿನದ ಅವಶ್ಯಕತೆಯಾಗಿದೆ.

ಸಹಕಾರಂ ಬಾಳ್ಗೆ ಸಹಕಾರಂ ಗೆಲ್ಗೆ

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂ

# ಕಟ್ಟಡ ಕಾಮಗಾರಿ ವೀಕ್ಷಿಸಿದ ಅಧ್ಯಕ್ಷ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಅಭಿವೃದ್ದಿಗಾಗಿ, ಇತರೆ ಮಹಾಮಂಡಳಗಳಂತೆ ಒಂದು ಪತ್ತಿನ ಮಹಾಮಂಡಳವನ್ನು ಸ್ಥಾಪಿಸಲು 1996ರಲ್ಲಿ ಸಹಕಾರಿ ಧುರೀಣರು ಚಿಂತನೆ ಮಾಡಿದರು.

ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ದಿಗೆ ಅಂತಿಮವಾಗಿ ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಹಕಾರಿ ರತ್ನ ಪುರಸ್ಕೃತರು ಆದ ಸನ್ಮಾನ್ಯ ಶ್ರೀ ಬಿ.ಎಲ್.ಲಕ್ಕೇಗೌಡ, ಮುಖ್ಯಪ್ರವರ್ತಕರು ಹಾಗೂ 12 ಪ್ರವರ್ತಕರು ಸೇರಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ದಿನಾಂಕ:06.11.2004ರಂದು ಪತ್ತಿನ ಮಹಾಮಂಡಳವನ್ನು ಸಹಕಾರ ಸಂಘಗಳ ನಿಬಂಧಕರು ನೋಂದಾಯಿಸಿದರು.

ಸಂಸ್ಥೆಯ ವ್ಯವಹಾರವು ಅಭಿವೃದ್ದಿ ಹೊಂದಿದ್ದು, ನೌಕರರು ಹಾಗೂ ಆಡಳಿತಮಂಡಳಿಯ ಕಾರ್ಯಕಲಾಪಗಳಿಗೆ ಸ್ಥಳದ ಕೊರತೆಯಿದ್ದ ಕಾರಣ ಕಾರ್ಯಾಲಯವನ್ನು 2015ರಲ್ಲಿ ಮಲ್ಲೇಶ್ವರಂ ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಿತು. ಪ್ರಸ್ತುತ ಇಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ಮಹಾಮಂಡಳವು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ಶ್ರೀ ಸಿ.ಎಂ. ಮಾರೇಗೌಡರವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ(ಬಿಡಿಎ), ವ್ಯಾಪ್ತಿಯಲ್ಲಿನ





# ಘಗಳ ಮಹಾಮಂಡಳ ನಿ., ಬೆಂಗಳೂರು

# ರು, ಆಡಳಿತ ಮಂಡಳಿ ನಿರ್ದೇಶಕರು



ನಂದಿನಿ ಬಡಾವಣೆ, ರಾಜೀವ ಗಾಂಧಿನಗರ, ಜೆ.ಬಿ.ಕಾವಲ್, ಬೆಂಗಳೂರು ಇಲ್ಲಿ 3594.38 ಚದರ ಅಡಿಯ ಮೂಲೆ ನಿವೇಶನವನ್ನು ಇ–ಹರಾಜು ಪ್ರಕ್ರಿಯೆಯ ಮೂಲಕ ಖರೀದಿಸಲಾಯಿತು. ಹಾಲಿ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರವರ ನೇತೃತ್ವದಲ್ಲಿ ಸದರಿ ನಿವೇಶನದಲ್ಲಿ ರೂ.3.15 ಕೋಟಿಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ.

ಕಟ್ಟಡ ನಿರ್ಮಾಣ ಪೂರೈಸುವ ಪಣತೊಟ್ಟಿರುವ ಆಡಳಿತ ಮಂಡಳಿ ಒಂದು ಸುಸಜ್ಜಿತ ಹಾಗೂ ಆಧುನಿಕ ವಿನ್ಯಾಸದ ಕಟ್ಟಡವನ್ನು ಸಹಕಾರ ಸಂಘಗಳ ಸೇವೆಗೆ ಅರ್ಪಿಸಲಿದ್ದಾರೆ ಹಾಗೂ ಆಡಳಿತಮಂಡಳಿ ಸದಸ್ಯರು ದೇಣಿಗೆ ಸಂಗ್ರಹಿಸುವಲ್ಲಿ ಶ್ರಮಿಸಿದ್ದಾರೆ. ಆಡಳಿತಮಂಡಳಿ ಸದಸ್ಯರು ನಿವೇಶನಕ್ಕೆ ಆಗಾಗ್ಗೆ ಭೇಟಿ ನೀಡಿ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿ, ಕಟ್ಟಡ ನಿರ್ಮಾಣದ ಕೆಲಸವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಈ ನಿವೇಶನದಲ್ಲಿ ಮಹಾಮಂಡಳದ ಆಡಳಿತ ಕಛೇರಿ, ಮಹಾಮಂಡಳದ ವತಿಯಿಂದ ಶಿಕ್ಷಣ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲು ಒಂದು ಸೆಮಿನಾರ್ ಹಾಲ್ ನಿರ್ಮಿಸಲಾಗುತ್ತಿದೆ.

ಪ್ರಸ್ತುತ ಕಟ್ಟಡ ನಿರ್ಮಾಣದ ಕಾಮಗಾರಿಯು ಶೇ.80 ಭಾಗದಷ್ಟು ಪೂರ್ಣಗೊಂಡಿದೆ.





# ಮಹಿಳೆಯರಿಗೆ ವಿಮೆ ಭದ್ರತೆ

# 16,196 ಸ್ವಸಹಾಯ ಸಂಘಗಳ 2,44,940 ಸದಸ್ಯೆಯರಿಗೆ ಎಲ್‌ಐಸಿಯಿಂದ ವಿಮೆ : ದೇಶದಲ್ಲೇ ಮೊದಲ ಪ್ರಯತ್ನ

**ಬೀದರ್ :** ಸ್ವಸಹಾಯ ಸಂಘಗಳ ಸದಸ್ಯೆಯರು ಡಿಸಿಸಿ ಬ್ಯಾಂಕಿನಿಂದ ಪಡೆಯುವ ಸಾಲಕ್ಕೆ ಆರ್ಥಿಕ ಭದ್ರತೆ ಒದಗಿಸಲು ಹಾಗೂ ಸದಸ್ಯೆಯರ ಕುಟುಂಬದ ಹಿತರಕ್ಷಣೆಯ ಸದುದ್ದೇಶದಿಂದ ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಜತೆ ಒಡಂಬಡಿಕೆ ಮಾಡಿಕೊಂಡು ವಿಮಾ ಸೌಲಭ್ಯ ಜಾರಿಗೊಳಿಸಿದೆ. ಡಿಸಿಸಿ ಬ್ಯಾಂಕ್‌ವೊಂದು ವಿಮೆ ಮೂಲಕ ಈ ರೀತಿಯ ಭದ್ರತೆ ಒದಗಿಸಿರುವುದು ದೇಶದಲ್ಲೇ ಇದೇ ಮೊದಲಾಗಿದೆ.

ಬ್ಯಾಂಕಿನಡಿ 16,196 ಸ್ವಸಹಾಯ ಸಂಘಗಳಿದ್ದು, 2,44,940 ಸದಸ್ಯೆಯರಿದ್ದಾರೆ. ಇವರಿಗೆ 507.77 ಕೋಟಿ ರೂ. ಸಾಲ ನೀಡಲಾಗಿದೆ. ಹೀಗೆ ಸಾಲ ಪಡೆದ ಸದಸ್ಯರಿಗೆ ಅಕಾಲಿಕವಾಗಿ ಏನೇ ಘಟಿಸಿದರೂ ಆ ಸಂಘದ ಕಾರ್ಯಗಳು ಎಂದಿನಂತೆ ನಡೆದುಕೊಂಡು ಹೋಗಬೇಕು. ಜತೆಗೆ ಮೃತರಾಗುವ ಸದಸ್ಯರ ಕುಟುಂಬಸ್ಥರಿಗೂ ಆರ್ಥಿಕ ನೆರವು ದೊರಕಬೇಕು ಎನ್ನುವುದು ಬ್ಯಾಂಕ್ ಅಧ್ಯಕ್ಷ ಉಮಾಕಾಂತ ನಾಗಮಾರಪಳ್ಳಿ ಅವರ ಸದುದ್ದೇಶವಾಗಿದೆ.

ಸ್ವಸಹಾಯ ಗುಂಪಿಗೆ ಸಾಲ ನೀಡಲಾಗುತ್ತದೆ. ಇದರಲ್ಲಿ ಒಬ್ಬರಿಗೆ ಏನಾದರೂ ಘಟಿಸಿದರೆ, ಉಳಿದವರು ಹಣ ಭರಿಸಬೇಕಾಗುತ್ತದೆ. ಇದು ಉಳಿದ ಸದಸ್ಯೆಯರಿಗೆ ಆರ್ಥಿಕವಾಗಿ ಭಾರವಾಗಿ ಪರಿಣಮಿಸುವುದನ್ನು ತಪ್ಪಿಸಲು ಹಾಗೂ ಸಂಘವು ಎಂದಿನಂತೆ ಮುನ್ನಡೆಯುವ ನಿಟ್ಟಿನಲ್ಲಿ ವಿಮೆಯಂತಹ ಮಹತ್ವದ ಯೋಜನೆಯನ್ನು ಬ್ಯಾಂಕಿನ ಶತಮಾನೋತ್ಸವ ಈ ಸಂದರ್ಭದಲ್ಲಿ ಜಾರಿಗೊಳಿಸಲಾಗಿದೆ.



ಡಿಸಿಸಿ ಬ್ಯಾಂಕ್ ಕೇವಲ ಸಾಲ ವಿತರಿಸುವುದು ಮತ್ತು ಮರುಪಾವತಿ ಮಾಡಿಕೊಳ್ಳುವುದಕ್ಕಷ್ಟೇ ಸೀಮಿತವಾಗದೇ, ಈ ಹಿಂದೆ ರೈತ ಕುಟುಂಬಗಳಿಗೆ ವೈಯಕ್ತಿಕ ಅಪಘಾತ ವಿಮೆಯಲ್ಲಿ ತೊಡಗಿಸಿದೆ. ಇದೀಗ ಸ್ವಸಹಾಯ ಗುಂಪಿನ ಸದಸ್ಯರಿಗೂ ಸಹ ಭಾರತೀಯ ಜೀವ ವಿಮಾ ನಿಗಮದೊಂದಿಗೆ (ಎಲ್‌ಐಸಿ) ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಟ್ಟಿನಲ್ಲಿ ಜಿಲ್ಲೆಯ ಮಹಿಳೆಯರ, ರೈತರಿಗೆ ಅನುಕೂಲವಾಗಲಿ ಎನ್ನುವುದೇ ನಮ್ಮ ಧ್ಯೇಯ ಎಂದು ಉಮಾಕಾಂತ ನಾಗಮಾರಪಳ್ಳಿ ತಿಳಿಸಿದರು.

25 ಸಾವಿರಕ್ಕೆ 97 ರೂ. ಪ್ರೀಮಿಯಂ, 50 ಸಾವಿರಕ್ಕೆ 194 ರೂ., 75 ಸಾವಿರಕ್ಕೆ 291 ರೂ., 1 ಲಕ್ಷಕ್ಕೆ 384 ರೂ., ಹಾಗೂ 2 ಲಕ್ಷ ಸಾಲಕ್ಕೆ 768 ರೂ. ಪ್ರೀಮಿಯಂ ಭರಿಸಲಾಗುತ್ತಿದೆ. ಈಗಾಗಲೇ ಮೊದಲ ಹಂತದಲ್ಲಿ 65 ಸಾವಿರ ಸದಸ್ಯೆಯರನ್ನು ವಿಮಾ ಸೌಲಭ್ಯದಡಿ ಸೇರಿಸಲಾಗಿದೆ. ಎರಡು–ಮೂರು ವಾರಗಳ ಒಳಗಾಗಿ ಉಳಿದೆಲ್ಲ ಸದಸ್ಯೆಯರಿಗೆ ವಿಮಾ ಸೌಲಭ್ಯದಡಿ ತರಲಾಗುತ್ತದೆ ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರಾದ ಚನ್ನಬಸಯ್ಯ ಸ್ವಾಮಿ ಮಾಹಿತಿ ನೀಡಿದರು.

**ಮಹಿಳೆ–ರೈತರಿಗೆ ಆರ್ಥಿಕ ಬಲ :** 1996 ರಲ್ಲಿ ದಿ| ಡಾ. ಗುರುಪಾದಪ್ಪ ನಾಗಮಾರಪಳ್ಳಿ ಅವರು ಸ್ವಸಹಾಯ ಸಂಘಗಳನ್ನು ಆರಂಭಿಸುವ ಮೂಲಕ ಜಿಲ್ಲೆಯ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಿದ್ದರು. 2016 ರಲ್ಲಿ ಜಾರಿಯಾದ ಫಸಲ್ ಬಿಮಾ ಯೋಜನೆ ಅನುಷ್ಠಾನದಡಿ ಬ್ಯಾಂಕ್ ಮೂಲಕ ಶ್ರಮಿಸಿ ಸತತವಾಗಿ ಬೆಳೆ ವಿಮೆ ನೋಂದಣಿಯಲ್ಲಿ ಜಿಲ್ಲೆ ಹಾಗೂ ಬ್ಯಾಂಕ್ ಮೊದಲ ಸ್ಥಾನದಲ್ಲಿರುವಂತೆ ಉಮಾಕಾಂತ ನಾಗಮಾರಪಳ್ಳಿ ಅವರು ಶ್ರಮವಹಿಸಿ, ರೈತರಿಗೆ ನೆರವಾದರು. ಇದೀಗ ಸ್ವಸಹಾಯ ಸಂಘದ ಸದಸ್ಯೆಯರಿಗೆ ಆರ್ಥಿಕ ಭದ್ರತೆ ಒದಗಿಸುವ ಮೂಲಕ ಬ್ಯಾಂಕ್ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ. ಬ್ಯಾಂಕ್‌ನ ಈ ನಡೆಯನ್ನು ಜಿಲ್ಲೆಯ ಸ್ವಸಹಾಯ ಸಂಘಗಳ ಲಕ್ಷಾಂತರ ಮಹಿಳೆಯರು ಸ್ವಾಗತಿಸಿದ್ದಾರೆ.

# ಭಾರತದಲ್ಲಿ ಸಹಕಾರ ಚಳವಳಿ ಬೆಳವಣಿಗೆಗೆ ವಿಶೇಷ ಪ್ರಯತ್ನ ಕೇಂದ್ರ ಸಹಕಾರ ಸಚಿವಾಲಯದಿಂದ ದಿಟ್ಟ ಹೆಜ್ಜೆ

**ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಪ್ರಪಂಚದಾದ್ಯಂತದ ಸಹಕಾರ ಸಂಘಗಳು ಸೇವಾ ಮನೋಭಾವದಿಂದ ಉತ್ತಮ ಸೇವೆ ಸಲ್ಲಿಸಿವೆ. ಸಹಕಾರ ತತ್ವಗಳ ಮತ್ತು ಮೌಲ್ಯಗಳ ಆಧಾರದ ಮೇಲೆ ಜನರಿಗೆ ಆರ್ಥಿಕ ಸಹಾಯ ಮಾಡುತ್ತಿವೆ. ಸಾಮಾಜಿಕ-ಆರ್ಥಿಕ ಬಿಕ್ಕಟ್ಟಿನ ನಡುವೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗಳು. ಸಹಕಾರ ಸಂಸ್ಥೆಗಳಿಗೆ ಪ್ರತ್ಯೇಕ ಸಚಿವಾಲಯ ಬೇಕು ಎಂಬ ಬೇಡಿಕೆ ಸಹಕಾರಿಗಳಿಂದ ಬಹಳ ದಿನಗಳಿಂದ ಇತ್ತು. ಸಹಕಾರ ಸಂಘಗಳಿಗಾಗಿ ಪ್ರತ್ಯೇಕ ಸಚಿವಾಲಯದ ರಚನೆಯಾಗಿದೆ. ಭಾರತದಲ್ಲಿ ಸಹಕಾರ ಚಳವಳಿಯ ಇತಿಹಾಸದಲ್ಲಿ ಇದು ಒಂದು ಹೆಗ್ಗುರುತು ಬೆಳವಣಿಗೆ. ಸಹಕಾರ ಸಚಿವಾಲಯವನ್ನು ಜುಲೈ 6, 2021ರಂದು "ಸಹಕಾರದ ಮೂಲಕ ಸಮೃದ್ಧಿ" ಧ್ಯೇಯದೊಂದಿಗೆ ರಚಿಸಲಾಗಿದೆ.**

**ಸ್ವ-ಸಹಾಯ ಮತ್ತು ಸಹಕಾರದ ಮೂಲಕ ಸಮುದಾಯದ ಪ್ರಗತಿಗಾಗಿ, ಸಾಮಾಜಿಕ ಮತ್ತು ಆರ್ಥಿಕ ಬಂಡವಾಳವನ್ನು ಕ್ರೋಢೀಕರಿಸುವ ಮೂಲಕ ಸಹಕಾರ ವಲಯವು ಭಾರತೀಯ ಆರ್ಥಿಕತೆಯ ಅಸಾಧಾರಣ ವಲಯವಾಗಿ ಹೊರಹೊಮ್ಮಬಲ್ಲದು ಎಂಬ ಆಶಾಭಾವನೆಯನ್ನು ಇರಿಸಿಕೊಳ್ಳಲಾಗಿದೆ.**

ವಿಶ್ವದ ಜನಸಂಖ್ಯೆಯ ಶೇ.12ರಷ್ಟು ಜನರು ಸಹಕಾರಿ ತತ್ವದಡಿ ಬಂದಿದ್ದಾರೆ. ಪ್ರಪಂಚದಲ್ಲಿರುವ 30 ಲಕ್ಷ ಸಹಕಾರ ಸಂಸ್ಥೆಗಳಲ್ಲಿ ಭಾರತದಲ್ಲೇ 8.5 ಲಕ್ಷ ಸಹಕಾರ ಸಂಸ್ಥೆಗಳಿದ್ದು 31 ಕೋಟಿ ಸದಸ್ಯರುಗಳು ಸಹಕಾರದ ದೊಡ್ಡ ಶಕ್ತಿಯಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಹಕಾರ ವ್ಯವಸ್ಥೆ ಮೂಲಕ ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತರುವ ಪ್ರಯತ್ನ ನಡೆಯುತ್ತಿದೆ. ರಾಷ್ಟ್ರದ, ರಾಜ್ಯಗಳು ಸಹಕಾರ ಚಳವಳಿಯ ಬೆಳವಣಿಗೆಗೆ ಪೋಷಕವಾಗುತ್ತಿವೆ.

ಇತ್ತೀಚೆಗೆ ರಾಷ್ಟ್ರದ, ರಾಜ್ಯದ ಸಹಕಾರ ಚಳವಳಿಯಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಸಹಕಾರ ಸಚಿವಾಲಯ ಆರಂಭವಾಗಿ, ಗೃಹ ಸಚಿವರಾದ ಅಮಿತ್ ಷಾ ಅವರು ಸಹಕಾರ ಸಚಿವರಾಗಿ ನೇಮಕಗೊಂಡು ಕಾರ್ಯಾರಂಭ ಮಾಡಿದ ಮೇಲೆ ರಾಷ್ಟ್ರದಾದ್ಯಂತ ಸಹಕಾರ ವಲಯದಲ್ಲಿ ಉತ್ಸಾಹದ ಸಂಚಲನ ಉಂಟಾಗಿದೆ. ಸಹಕಾರ ವ್ಯವಸ್ಥೆಗೆ ಹೊಸ ಆಯಾಮ ದೊರಕುವ ಸೂಚನೆಗಳು ಕಂಡುಬರುತ್ತಿವೆ.

ಸಹಕಾರ ಕ್ಷೇತ್ರ ಬಲಪಡಿಸಲು ನಾನಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ವಲಯವಾರು ಸಮ್ಮೇಳನಗಳನ್ನು ಏರ್ಪಡಿಸಿ ಚಿಂತನ-ಮಂತನ ನಡೆಸಲಾಗುತ್ತಿದೆ. ಇವುಗಳಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು, ಸಹಕಾರ ಸಂಘಗಳ ಡೇಟಾಬೇಸ್, ಸಹಕಾರ ವಿಶ್ವವಿದ್ಯಾಲಯ, ರೈತರಿಗೆ ಕನಿಷ್ಠ ಬೆಂಬಲ ಬೆಲೆಯಲ್ಲಿ ಅಸಾಧಾರಣ ಏರಿಕೆ ಸೇರಿದಂತೆ ಇತರ ವಿಷಯಗಳ ಕಂಡೆ ಗಮನ ನೀಡಲಾಗುತ್ತಿದೆ.

ಭಾರತದ ಸಹಕಾರಿ ವ್ಯವಸ್ಥೆಯು ಕ್ರೆಡಿಟ್ ಮತ್ತು ಸಾಲೇತರ ಸಹಕಾರ ಸಂಸ್ಥೆಗಳನ್ನು ಒಳಗೊಂಡಿದೆ. ಭಾರತದಲ್ಲಿ ಮಾರ್ಚ್ 2018 ರ ಹೊತ್ತಿಗೆ 8.5 ಲಕ್ಷ ಸಹಕಾರ ಘಟಕಗಳು (NCUI, 2018) ಕಾರ್ಯನಿರ್ವಹಿಸುತ್ತಿವೆ. ದೇಶದ ಒಟ್ಟು ಸಹಕಾರ ಘಟಕಗಳಲ್ಲಿ 20% (1.77 ಲಕ್ಷ ಘಟಕಗಳು) ಕ್ರೆಡಿಟ್ ಸಹಕಾರಿಗಳಾಗಿವೆ. ಉಳಿದ 80% (6.73 ಲಕ್ಷ) ವಿವಿಧ ವೈವಿಧ್ಯಮಯ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಾಲೇತರ ಸಹಕಾರ ಸಂಸ್ಥೆಗಳಾಗಿವೆ. ಉತ್ಪಾದಕ, ಸಂಸ್ಕರಣೆ, ಗ್ರಾಹಕ, ಕೈಗಾರಿಕಾ, ಮಾರುಕಟ್ಟೆ, ಪ್ರವಾಸೋದ್ಯಮ, ಆಸ್ಪತ್ರೆ, ವಸತಿ, ಸಾರಿಗೆ, ಕಾರ್ಮಿಕ, ಕೃಷಿ, ಸೇವೆ, ಜಾನುವಾರು, ಹೈನುಗಾರಿಕೆ, ಮೀನುಗಾರಿಕೆ ಮತ್ತು ಬಹುಪಯೋಗಿ ಸಹಕಾರ ಸಂಘಗಳು ಇತ್ಯಾದಿ. ದೇಶದಲ್ಲಿ ಮೂರು ಹಂತದ ಸಹಕಾರಿ ಸಾಲ ವಲಯದಲ್ಲಿ ಸುಮಾರು 98,000 ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ಇದ್ದು 63 ಸಾವಿರಕ್ಕೂ ಹೆಚ್ಚು ಕ್ರಿಯಾಶೀಲವಾಗಿವೆ. ಇದರ ಜೊತೆಗೆ, ವಿವಿಧ ವೈವಿಧ್ಯಮಯ ಸಾಲೇತರ ಸಹಕಾರ ಕ್ಷೇತ್ರಗಳಲ್ಲಿ ತೊಡಗಿರುವ ಹಲವಾರು ಇತರ ಪ್ರಾಥಮಿಕ ಹಂತದ ಸಹಕಾರಗಳಿವೆ.

ಸಹಕಾರ ಸಂಸ್ಥೆಗಳು ಸಾಮಾನ್ಯ ಆರ್ಥಿಕ ಸಾಮಾಜಿಕ ಗುರಿಯೊಂದಿಗೆ ಸೇವೆ ಸಲ್ಲಿಸುವ ಮೂಲಕ ನಂಬಿಕೆ, ವಿಶ್ವಾಸಕ್ಕೆ ಪಾತ್ರವಾಗಿದೆ. ತಳಮಟ್ಟದಲ್ಲಿ ಸಾಮೂಹಿಕವಾಗಿರುವ ಸಹಕಾರಿ ಸಂಘಗಳು ಸಮುದಾಯದ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತವೆ. ಆಡಳಿತ, ವ್ಯಾಪಾರ ಕಾರ್ಯಾಚರಣೆಗಳು, ಸಾಂಸ್ಥಿಕ ಕೌಶಲ್ಯಗಳು, ಕೆಲಸದ ಹಂಚಿಕೆ, ಪಾವತಿ/ವ್ಯವಹಾರ, ಮಾರುಕಟ್ಟೆ ವ್ಯವಸ್ಥೆಗಳು, ಪೂರೈಕೆ ಸರಪಳಿ ಮುಂತಾದ ವಿವಿಧ ನಿಯತಾಂಕಗಳ ಮೇಲೆ ಈ ಘಟಕಗಳು ಆಧಾರಿತ/ಬಲಪಡಿಸುವ ಅಗತ್ಯವಿದೆ. ಎಲ್ಲಾ ಸಹಕಾರಿ ಅಭಿವೃದ್ಧಿ ಪ್ರಯತ್ನಗಳ ಪರಿಣಾಮಕಾರಿ ಸಮನ್ವಯವನ್ನು ಹೊಂದಲು ತುರ್ತು ಅಗತ್ಯವಿದೆ. ದೇಶದಲ್ಲಿ ಕ್ರಿಯಾಶೀಲ ಸಹಕಾರ ಚಳವಳಿಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸುತ್ತಾ ಬಂದಿವೆ.

ಸಹಕಾರ ಅಭಿವೃದ್ಧಿಯ ಕುರಿತು ರಾಷ್ಟ್ರವ್ಯಾಪಿ ಅಂಕಿ-ಅಂಶಗಳ ಸಹಿತ ಸಮಗ್ರ ಮಾಹಿತಿಗಳನ್ನು ಸಿದ್ಧಪಡಿಸುವುದು, ನಿರ್ವಹಿಸುವುದು ಮತ್ತು ಬಲಪಡಿಸುವುದು ಅಗತ್ಯವಾಗಿದೆ. ಸಹಕಾರಿ

ಸಂಸ್ಥೆಗಳಲ್ಲಿ ಸೂಕ್ತವಾದ ತಂತ್ರಜ್ಞಾನ ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ (MIS) ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು. ಇದರಿಂದ ವಲಯದ ಸುಗಮ ಬೆಳವಣಿಗೆಗಾಗಿ ಭವಿಷ್ಯದಲ್ಲಿ ಸಮಯೋಚಿತ ಮತ್ತು ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗಲಿದೆ.

**ರಾಷ್ಟ್ರೀಯ ಡೇಟಾಬೇಸ್ ಅಗತ್ಯ :** ಆರ್ಥಿಕತೆಯ ಪ್ರಗತಿಯಲ್ಲಿ ಸಹಕಾರಿಗಳ ಕೊಡುಗೆಯನ್ನು ಪ್ರಮಾಣೀಕರಿಸಲು ಸಹಕಾರ ಸಂಘ–ಸಂಸ್ಥೆಗಳ ಅಂಕಿಅಂಶಗಳು ಅತ್ಯಗತ್ಯ. ವೈವಿಧ್ಯಮಯ ವಲಯದ ಸಹಕಾರಗಳ ವಿವಿಧ ಬೆಳವಣಿಗೆಯ ನಿಯತಾಂಕಗಳ ಮೇಲೆ ಮಾಹಿತಿಯನ್ನು (ಡೇಟಾವನ್ನು) ಸಂಗ್ರಹಿಸಲು ಯಾವುದೇ ಏಕರೂಪದ ಡೇಟಾಬೇಸ್ ಇಲ್ಲದಿರುವುದರಿಂದ ಪ್ರಸ್ತುತ ಸಹಕಾರ ಸಂಘಗಳ ಮೇಲೆ ವಿಶ್ವಾಸಾರ್ಹ ಮತ್ತು ಹೋಲಿಸಬಹುದಾದ ಅಂಕಿಅಂಶಗಳು ಲಭ್ಯವಾಗುತ್ತಿಲ್ಲ. ಸಂಸ್ಥೆಗಳು ವಲಯ–ನಿರ್ದಿಷ್ಟ ಡೇಟಾವನ್ನು ಸಂಗ್ರಹಿಸುತ್ತಿವೆ. ಅಗತ್ಯ ಸಂಕಲನಕ್ಕಾಗಿ ಎನ್‌ಸಿಯುಐಗೆ ಸಲ್ಲಿಸುತ್ತಿವೆ. ಸಹಕಾರಿಗಳ ಮೇಲೆ ದತ್ತಾಂಶವನ್ನು ಸಂಗ್ರಹ ಮಾಡುವ ಅವಶ್ಯಕತೆಯಿದೆ. ಆದ್ದರಿಂದ ದತ್ತಾಂಶದ ಅನ್ವಯವು ಸಹಕಾರ ಅಭಿವೃದ್ಧಿಗಾಗಿ ಉತ್ತಮ ನಿರ್ವಹಣಾ ಮತ್ತು ನೀತಿ ನಿರ್ಧಾರಗಳನ್ನು ವಿನ್ಯಾಸಗೊಳಿಸಲು ಸಹಾಯ ಮಾಡುತ್ತದೆ.

**ಸಹಕಾರದ ಮೂಲಕ ಸಮೃದ್ಧಿ : 10 ಅಂಶಗಳ ಕಾರ್ಯಸೂಚಿ**

ಸಂಸತ್ ಅಧಿವೇಶನದ ಸಂದರ್ಭದಲ್ಲಿ ಇತ್ತೀಚೆಗೆ ರಾಜ್ಯಸಭೆಯಲ್ಲಿ ಸಂಸದರು ಕೇಳಲಾದ ಸಹಕಾರ ವಲಯಕ್ಕೆ ಸಂಬಂಧಿಸಿದ ಪ್ರಶ್ನೆಗೆ, ಉತ್ತರಿಸಿದ ಸಹಕಾರ ಸಚಿವರಾದ ಅಮಿತ್ ಷಾ ಅವರು ಲಿಖಿತ ಉತ್ತರದಲ್ಲಿ "ಸಹಕಾರ ವಲಯವನ್ನು ಪುನಶ್ಚೇತನಗೊಳಿಸುವ ಸಲುವಾಗಿ, ಪಾರದರ್ಶಕತೆ, ಆಧುನೀಕರಣ, ಗಣಕೀಕರಣ, ಸ್ಪರ್ಧಾತ್ಮಕವಾಗಿ ಸಹಕಾರ ಸಂಘಗಳನ್ನು ರಚಿಸುವುದು ಮತ್ತು ಉತ್ತರಾಖಂಡ ರಾಜ್ಯ ಸೇರಿದಂತೆ ದೇಶದಾದ್ಯಂತ ತಳಮಟ್ಟದ ಜನರಿಗೆ ಸಹಕಾರ ವ್ಯಾಪ್ತಿಯನ್ನು ಹೆಚ್ಚಿಸುವ ಸಲುವಾಗಿ. ಸಹಕಾರ ಸಚಿವಾಲಯವು 'ಸಹಕಾರದ ಮೂಲಕ ಸಮೃದ್ಧಿ' ಅಡಿಯಲ್ಲಿ ವಿವಿಧ ಯೋಜನೆಯನ್ನು ರೂಪಿಸುತ್ತಿದೆ ಮತ್ತು ವಿವಿಧ ಅಂಶಗಳು ಹೀಗಿವೆ ಎಂದು ಹೇಳಿದ್ದಾರೆ.

1. ಜೂನ್ 1– 2022ರಂದು, ಕೇಂದ್ರ ಸಚಿವ ಸಂಪುಟವು ಸಹಕಾರ ಸಂಸ್ಥೆಗಳಿಗೆ ಸರ್ಕಾರಿ ಇ–ಮಾರ್ಕೆಟಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ 'ಖರೀದಿದಾರ' ಎಂದು ನೋಂದಾಯಿಸಲು ಅವಕಾಶ ಮಾಡಿಕೊಟ್ಟಿದೆ. ಇದು ದೇಶಾದ್ಯಂತ ಜಿಇಎಂ (GEM)" ಪೋರ್ಟಲ್‌ನಲ್ಲಿ ನೋಂದಾಯಿಸಲಾದ ಸುಮಾರು 40 ಲಕ್ಷ ಮಾರಾಟಗಾರರಿಂದ ಸರಕು ಮತ್ತು ಸೇವೆಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಇದು ಸಹಕಾರ ಸಂಸ್ಥೆಗಳಿಗೆ ಉಳಿತಾಯ ಮಾಡಲು ಮತ್ತು ಅವುಗಳ ಸಂಗ್ರಹಣೆ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.
2. ಮೂರು ಹಂತದ ಗ್ರಾಮೀಣ ಪ್ರದೇಶದ ಕೆಳಭಾಗದಲ್ಲಿರುವ 63,000 ಕ್ರಿಯಾತ್ಮಕ ಪ್ಯಾಕ್ಸ್‌ಗಳ ಡಿಜಿಟಲೀಕರಣಕ್ಕಾಗಿ 2,516 ಕೋಟಿ ರೂಪಾಯಿಗಳ ಬಜೆಟ್ ವೆಚ್ಚದೊಂದಿಗೆ 2022ರ ಜೂನ್ 29ರಂದು ಕೇಂದ್ರ ಪ್ರಾಯೋಜಿತ ಯೋಜನೆಯಾದ "ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿಗಳ ಗಣಕೀಕರಣ (PACS)" ಅನ್ನು ಪ್ರಾರಂಭಿಸಲಾಗಿದೆ.
3. ಪ್ಯಾಕ್ಸ್‌ಗಾಗಿ ಕರಡು ಮಾದರಿ ಉಪ–ನಿಯಮಗಳನ್ನು ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಸಹಕಾರ ಮಾಹಮಂಡಳಗಳು ಮತ್ತು ಎಲ್ಲಾ ಇತರ ಪಾಲುದಾರರೊಂದಿಗೆ ಸಮಾಲೋಚಿಸಿ ತಮ್ಮ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು ಮತ್ತು ಅವುಗಳನ್ನು ಗ್ರಾಮ ಮಟ್ಟದಲ್ಲಿ ರೋಮಾಂಚಕ ಬಹುಪಯೋಗಿ ಆರ್ಥಿಕ ಘಟಕಗಳಾಗಿ ಮಾಡಲು ಯೋಜನೆ ಸಿದ್ಧಪಡಿಸಲಾಗುತ್ತಿದೆ.
4. ಸರ್ಕಾರವು 2021 ರ ಅಕ್ಟೋಬರ್ 2ರ ದಿನಾಂಕದ ತನ್ನ ಅಧಿಸೂಚನೆಯ ಪ್ರಕಾರ ಸಕ್ಕರೆ ಸಹಕಾರ ಕಾರ್ಖಾನೆಗಳು ರೈತರಿಗೆ ಹೆಚ್ಚಿನ ಕಬ್ಬಿನ ಬೆಲೆಗಳನ್ನು ನ್ಯಾಯಯುತ ಮತ್ತು ಲಾಭದಾಯಕ ಬೆಲೆಗೆ ಪಾವತಿಸಲು ಹೆಚ್ಚುವರಿ ಆದಾಯ ತೆರಿಗೆಗೆ ಒಳಪಡುವುದಿಲ್ಲ ಎಂದು ಸ್ಪಷ್ಟಪಡಿಸುವ ಮೂಲಕ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಪ್ರಮುಖ ಪರಿಹಾರವನ್ನು ನೀಡಿತು ಮತ್ತು ಇದು ಸಂದರ್ಭಾನುಸಾರ ಆಯಾ ರಾಜ್ಯ ಸಲಹೆ ಬೆಲೆ ನಿರ್ಧಾರವಾಗುತ್ತದೆ.
5. ಸಹಕಾರ ಸಂಘಗಳ ಮೇಲಿನ ಹೆಚ್ಚುವರಿ ಶುಲ್ಕವನ್ನು 12% ರಿಂದ 7%ಕ್ಕೆ ಇಳಿಸಲಾಗಿದೆ. ಆ ಸಹಕಾರ ಸಂಘಗಳಿಗೆ ರೂ. 1 ಕೋಟಿ ಮತ್ತು ರೂ. 10 ಕೋಟಿ ಸಹಕಾರ ಸಂಘಗಳು ಮತ್ತು ಅದರ ಸದಸ್ಯರ ಆದಾಯವನ್ನು ಹೆಚ್ಚಿಸಲು ನೆರವಾಗಲಿದೆ.
6. ಕಾರ್ಪೊರೇಟ್‌ಗಳೊಂದಿಗೆ ಸ್ಪರ್ಧಾತ್ಮಕವಾಗಿ ಉತ್ತಮ ವ್ಯವಹಾರ ನಡೆಸಲು ಅನುಕೂಲವಾಗುವಂತೆ ಸಹಕಾರಿಗಳಿಗೆ ಕನಿಷ್ಠ ಪರ್ಯಾಯ ತೆರಿಗೆ ದರವನ್ನು 18.5% ರಿಂದ 15% ಕ್ಕೆ ಇಳಿಸಲಾಗಿದೆ.
7. ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಗೆ ಉತ್ತೇಜನ ನೀಡಲು ಸಹಕಾರ ಸಂಸ್ಥೆಗಳಿಗೆ ಸಮರ್ಪಕ, ಕೈಗೆಟಕುವ ಮತ್ತು ಸಕಾಲಿಕ ಸಾಲವನ್ನು ಒದಗಿಸುವ ಸಲುವಾಗಿ, ಷೆಡ್ಯೂಲ್ಡ್ ನಗರ ಸಹಕಾರಿ ಬ್ಯಾಂಕುಗಳು, ರಾಜ್ಯ ಸಹಕಾರ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ಗ್ಯಾರಂಟಿ ಫಂಡ್ ಟ್ರಸ್ಟ್ (CGTMSE) ಯೋಜನೆಯಲ್ಲಿ ಸದಸ್ಯ ಸಾಲ ನೀಡುವ ಸಂಸ್ಥೆಗಳಾಗಿ 3ನೇ ಫೆಬ್ರವರಿ 2022ರ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ.
8. ಜೂನ್ 8, 2022 ರಂದು, ಭಾರತ ಸರ್ಕಾರವು ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಹಕಾರಿಗಳ ಅಭಿವೃದ್ಧಿಗೆ ಹೊಸ ಪ್ರಚೋದನೆಯನ್ನು ನೀಡಲು ನಿರ್ಧಾರಗಳನ್ನು ತೆಗೆದುಕೊಂಡಿದೆ.

ಎ. ಪಟ್ಟಣ ಸಹಕಾರ ಬ್ಯಾಂಕ್‌ಗಳು (ಯುಸಿಬಿಗಳು) ಮತ್ತು ಗ್ರಾಮೀಣ

ಸಹಕಾರಿ ಬ್ಯಾಂಕ್‌ಗಳು (ಆರ್‌ಸಿಬಿಗಳು – ರಾಜ್ಯ ಸಹಕಾರಿ ಬ್ಯಾಂಕ್‌ಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು) ವೈಯಕ್ತಿಕ ಗೃಹ ಸಾಲದ ಮಿತಿಯನ್ನು ದ್ವಿಗುಣಗೊಳಿಸಲಾಗಿದೆ.

ಬಿ. ವಾಣಿಜ್ಯ ರಿಯಲ್ ಎಸ್ಟೇಟ್ ವಸತಿ ವಲಯಕ್ಕೆ ಸಾಲ ನೀಡಲು ಆರ್‌ಬಿಐಗಳಿಗೆ ಅವಕಾಶ ನೀಡಲಾಗಿದೆ.

ಸಿ. ವಾಣಿಜ್ಯ ಬ್ಯಾಂಕ್‌ಗಳಂತೆ ತಮ್ಮ ಗ್ರಾಹಕರಿಗೆ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲು ಪಟ್ಟಣ ಸಹಕಾರ ಬ್ಯಾಂಕಿಗಳಿಗೆ ಅನುಮತಿ ನೀಡಲಾಗಿದೆ.

9. ಸಹಕಾರಿ ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಯ ಗುರಿಯೊಂದಿಗೆ 'ಸಮೃದ್ಧಿಗೆ ಸಹಕಾರ' ಯೋಜನೆಯನ್ನು ರೂಪಿಸಲು ಸಚಿವಾಲಯವು ಉಪಕ್ರಮವನ್ನು ತೆಗೆದುಕೊಳ್ಳುತ್ತಿದೆ.

10. ದೇಶಾದ್ಯಂತ ಸಹಕಾರಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಆಧುನೀಕರಿಸುವ ಮತ್ತು ವೃತ್ತಿಪರಗೊಳಿಸುವ ಯೋಜನೆಯು ಸಹ ರೂಪಿಸಲ್ಪಡುತ್ತದೆ.

ಮೇಲಿನವುಗಳ ಜೊತೆಗೆ, ಸಚಿವಾಲಯವು ಪ್ರಸ್ತುತ ಸಹಕಾರಿಗಳಿಗಾಗಿ ಹೊಸ ರಾಷ್ಟ್ರೀಯ ಸಹಕಾರ ನೀತಿಯನ್ನು ರೂಪಿಸುವ ಪ್ರಕ್ರಿಯೆಯಲ್ಲಿದೆ. ಹೊಸ ಸಹಕಾರ ನೀತಿಯ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಏಪ್ರಿಲ್ 12 ಮತ್ತು 13 2022ರಂದು ಎಲ್ಲಾ ರಾಜ್ಯಗಳು/UTಗಳಿಂದ ಸಹಕಾರ ಕಾರ್ಯದರ್ಶಿಗಳು/ RCSಗಳೊಂದಿಗೆ ಏರ್ಪಡಿಸಿ ಕ್ಷೇತ್ರ ಬೆಳವಣಿಗೆಗೆ ಚರ್ಚಿಸಲಾಗಿತ್ತು. ಸೆಪ್ಟೆಂಬರ್ ಮೊದಲ ವಾರದಲ್ಲಿ ದೆಹಲಿಯಲ್ಲಿ ರಾಜ್ಯ ಸಹಕಾರ ಸಚಿವರುಗಳೊಂದಿಗೆ ಇದೇ ರೀತಿಯ ಸಭೆಯನ್ನು ಆಯೋಜಿಸಲಾಗಿದೆ.

ಏಪ್ರಿಲ್ 1 ರಂದು ಬೆಂಗಳೂರಿನಲ್ಲಿ ರಾಜ್ಯದ ಸಹಕಾರ ಇಲಾಖೆ ಏರ್ಪಡಿಸಿದ್ದ "ಸಹಕಾರ ಸಮ್ಮೇಳನ"ದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮೀತ್ ಷಾ ಮತ್ತು ಕೇಂದ್ರ ಸಚಿವರು, ಮುಖ್ಯ ಮಂತ್ರಿಗಳು, ಸಹಕಾರ ಸಚಿವರು, ಮಹಾಮಂಡಳದ ಅಧ್ಯಕ್ಷರುಗಳು ಭಾಗವಹಿಸಿ ಸಮ್ಮೇಳನದಲ್ಲಿ ಯಶಸ್ವಿನಿ ಆರೋಗ್ಯ ಯೋಜನೆ ಮರು ಜಾರಿಗೆ "ಲೋಗ್" ಬಿಡುಗಡೆ ಮತ್ತು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್‌ನ "ಲೋಗ್" ಸಹ ಬಿಡುಗಡೆ ಮಾಡಿ ಭವಿಷ್ಯದ ಸಹಕಾರ ಚಳವಳಿಯ ಬಗ್ಗೆ ಚರ್ಚಿಸಲಾಯಿತು. ಇತ್ತೀಚಿನ ದಿನಗಳಲ್ಲಿ ವಲಯವಾರು ಸಹಕಾರ ಸಮ್ಮೇಳನಗಳನ್ನು ಏರ್ಪಡಿಸುತ್ತಿರುವ ಎನ್‌ಸಿಯುಐ ಮತ್ತು ಕೇಂದ್ರ ಸಹಕಾರ ಸಚಿವಾಲಯ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಹಕಾರ ಸಂಸ್ಥೆಗಳನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ.


ಹೀಗಾಗಿ, ರಾಷ್ಟ್ರದ ಸಮಗ್ರ ಸಹಕಾರ ಅಭಿವೃದ್ಧಿಗಾಗಿ ಮೊದಲ ಬಾರಿಗೆ ಕೇಂದ್ರ ಸಹಕಾರ ಸಚಿವಾಲಯ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೊಳಿಸಲು ಪ್ರಯತ್ನಸುತ್ತಿದೆ. ಇದು ಆಶಾದಾಯಕ ಬೆಳವಣಿಗೆ ಎನಿಸಿದೆ.

ಕೃಪೆ : ಸುಧಾ ಪಾಟೀಲ, ಬೆಂಗಳೂರು

## ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘಕ್ಕೆ "ಸಾಧನಾ ಪ್ರಶಸ್ತಿ"



**ಮಂಗಳೂರು :** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘಕ್ಕೆ 2021–22ನೇ ಸಾಲಿನ ವ್ಯವಹಾರದಲ್ಲಿ ಸಾಧಿಸಿದ ಸರ್ವತೋಮುಖ ಪ್ರಗತಿಯನ್ನು ಗುರುತಿಸಿ "ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಸಾಧನಾ ಪ್ರಶಸ್ತಿ 2021–22" ಪ್ರಶಸ್ತಿಯನ್ನು ದಿನಾಂಕ 05/08/2022 ರಂದು ನಡೆದ ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ 2021–22ನೇ ಸಾಲಿನ ವಾರ್ಷಿಕ ಸಭೆಯಲ್ಲಿ ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಡಾ। ಎಂ.ಎನ್. ರಾಜೇಂದ್ರ ಕುಮಾರ್ ಇವರು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಚಿತ್ತರಂಜನ್ ಬೋಳಾರ್ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

... ಹಿಂದಿನ ಸಂಚಿಕೆಯಿಂದ

### ವಿದ್ಯುನ್ಮಾನ ತೀರುವೆ ಸೇವೆಗಳು [ECS: Electronic Clearing Services]

ಒಂದು ಬ್ಯಾಂಕಿನ ಖಾತೆಯಿಂದ ಇನ್ನೊಂದು ಬ್ಯಾಂಕಿನ ಖಾತೆಗೆ ಹಣವನ್ನು ವಿದ್ಯುನ್ಮಾನ ರೂಪದಲ್ಲಿ ವರ್ಗಾವಣೆ ಮಾಡುವ ಇನ್ನೊಂದು ವಿಧಾನವಿದು. ಈ ವ್ಯವಸ್ಥೆಯನ್ನು ಬಳಸಿ ಒಂದು ಖಾತೆಯಿಂದ ಅನೇಕ ಇತರ ಖಾತೆಗಳಿಗೆ ಹಣದ ವರ್ಗಾವಣೆ ಒಮ್ಮೆಗೇ ವರ್ಗಾವಣೆ ಮಾಡಲಾಗುವುದು. ಉದಾ: ಒಂದು ಕಂಪನಿಯು ತನ್ನ ಷೇರುದಾರರಿಗೆ ಲಾಭಾಂಶ ಅಥವಾ ತನ್ನ ಉದ್ಯೋಗಿಗಳಿಗೆ ಸಂಬಳ ನೀಡುವಾಗ ಆ ಕಂಪನಿಯ ಖಾತೆಯಿಂದ ಸಾವಿರಾರು ಷೇರುದಾರರ/ಉದ್ಯೋಗಿಗಳ ಖಾತೆಗಳಿಗೆ ಹಣ ವರ್ಗಾವಣೆಯಾಗುತ್ತದೆ. ಹಾಗೇ ಅನೇಕ ಖಾತೆಗಳಿಂದ ಒಮ್ಮೆಗೇ ಒಂದು ಖಾತೆಗೂ ಹಣ ವರ್ಗಾವಣೆ ಮಾಡಬಹುದು. ಉದಾ: ಸಾವಿರಾರು ವಿದ್ಯುತ್ ಬಳಕೆದಾರರ ಖಾತೆಗಳಿಂದ ವಿದ್ಯುತ್ ಸರಬರಾಜು ಕಂಪನಿಗೆ ಹಣ ವರ್ಗಾವಣೆ. ಇದೇ ರೀತಿ, ನೀರಿನ ಬಿಲ್ಲು/ ಟೆಲಿಫೋನ್ ಬಿಲ್ಲುಗಳ ಪಾವತಿ. ಹಣ ವರ್ಗಾಯಿಸುವ ಬ್ಯಾಂಕನ್ನು ಪ್ರಾಯೋಜಕ ಬ್ಯಾಂಕ್ [sponsor bank] ಎಂದೂ, ಹಣ ಪಡೆಯುವ ಬ್ಯಾಂಕನ್ನು ಗಮ್ಯ ಬ್ಯಾಂಕ್ [destination bank] ಎಂದೂ ಕರೆಯಲಾಗುತ್ತದೆ. ಭಾರತದಲ್ಲಿ ಈ ವಿದ್ಯುನ್ಮಾನ ತೀರುವೆ ಸೇವೆಗಳ ನಿರ್ವಹಣೆಯನ್ನು ಭಾರತೀಯ ರಿಸರ್ವ್ ಬ್ಯಾಂಕು ಮಾಡುತ್ತಿದೆ.

### ಬ್ಯಾಂಕಿಂಗ್ ಓಂಬುಡ್ಸ್‌ಮನ್

ರಿಸರ್ವ್ ಬ್ಯಾಂಕ್ 1995ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತು. ಬ್ಯಾಂಕುಗಳ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸುವುದೇ ಇದರ ಉದ್ದೇಶ. ಎಲ್ಲ ವಾಣಿಜ್ಯ ಬ್ಯಾಂಕುಗಳಿಗೂ, ಅನುಸೂಚಿತ ಪ್ರಾಥಮಿಕ ಸಹಕಾರಿ ಬ್ಯಾಂಕುಗಳಿಗೂ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೂ ಈ ಯೋಜನೆ ಅನ್ವಯವಾಗುತ್ತದೆ. ಏಳು ವರ್ಷಗಳ ನಂತರ 2002ರಲ್ಲಿ ಈ ಯೋಜನೆಯನ್ನು ಮರುಪರಿಶೀಲಿಸಲಾಯಿತು. ರಿಸರ್ವ್ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕ ಅಥವಾ ಪ್ರಧಾನ ವ್ಯವಸ್ಥಾಪಕರೊಬ್ಬರು ಬ್ಯಾಂಕಿಂಗ್ ಓಂಬುಡ್ಸ್‌ಮನ್ ಆಗಿರುತ್ತಾರೆ. ಓಂಬುಡ್ಸ್‌ಮನ್ ಎಂಬ ಜರ್ಮನ್ ಶಬ್ದಕ್ಕೆ 'ಜನಹಿತ ರಕ್ಷಕ' ಎಂದರ್ಥ. ಬ್ಯಾಂಕುಗಳ ಗ್ರಾಹಕರು ತಮ್ಮ ಕುಂದು ಕೊರತೆಗಳನ್ನು ಅವರ ಗಮನಕ್ಕೆ ತಂದು ಸೂಕ್ತ ಪರಿಹಾರ ಪಡೆಯಬಹುದು. ಸರಳವೂ, ತ್ವರಿತವೂ, ಕಡಿಮೆ ಖರ್ಚಿನದೂ ಆಗಿರುವ ಈ ವ್ಯವಸ್ಥೆಯು ಬ್ಯಾಂಕ್ ಗ್ರಾಹಕರಿಗೆ ಅತ್ಯಂತ ಉಪಯುಕ್ತವಾಗಿದೆ.

### ಈ ಯೋಜನೆಯಂತೆ

- ದೂರುದಾರರ ಹೆಸರು/ವಿಳಾಸ, ಬ್ಯಾಂಕಿನ ಹೆಸರು/ವಿಳಾಸ, ಸೇವೆಯಲ್ಲಿನ ದೋಷ ಅಥವಾ ಕೊರತೆಯ ವಿವರ, ಸಂಬಂಧಪಟ್ಟ ದಾಖಲೆಗಳ ನಕಲು, ಬೇಡುವ ಪರಿಹಾರ– ಇವನ್ನು ಲಿಖಿತ ದೂರಿನಲ್ಲಿ ಸ್ಪಷ್ಟವಾಗಿ ಸೂಚಿಸಿರಬೇಕು. ದೂರು ನೀಡಲು ಶುಲ್ಕ ಪಾವತಿಯ ಅಗತ್ಯವಿಲ್ಲ. ದೂರನ್ನು ಅಂಚೆ/ಕೊರಿಯರ್ ಮೂಲಕ ಅಥವಾ ನೇರವಾಗಿ ಸಲ್ಲಿಸಬಹುದು.
- ಓಂಬುಡ್ಸ್‌ಮನ್ನರು ಸಂಬಂಧಿಸಿದ ಬ್ಯಾಂಕಿನಿಂದ ತಮಗೆ ಬಂದ ದೂರಿನ ಬಗ್ಗೆ ಸ್ಪಷ್ಟೀಕರಣ ಪಡೆಯುತ್ತಾರೆ. ಎರಡೂ ಕಕ್ಷಿಗಳನ್ನು ಕರೆಸಿ ಮುಖಾಮುಖಿಯಾಗಿಸಿ ಸಂಧಾನದ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ನೆರವಾಗುತ್ತಾರೆ. ಅದು ಸಾಧ್ಯವಾಗದಿದ್ದಾಗ ತಾವೇ ಸೂಕ್ತ ಪರಿಹಾರ ಸೂಚಿಸುತ್ತಾರೆ. 10 ಲಕ್ಷ ರೂ.ವರೆಗೆ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.
- ತೀರ್ಪು ಸಮಾಧಾನ ತರದಿದ್ದರೆ ತೀರ್ಪು ಬಂದ 45 ದಿನಗಳೊಳಗಾಗಿ ರಿಸರ್ವ್ ಬ್ಯಾಂಕಿನ ಉಪ ಗವರ್ನರ್ ಅವರಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ.

ಸಾಲಗಳಿಗೆ ರಿಸರ್ವ್ ಬ್ಯಾಂಕಿನ ಆದೇಶಕ್ಕೆ ವಿರುದ್ಧವಾಗಿ ಹೆಚ್ಚು ಬಡ್ಡಿ ವಿಧಿಸುವುದು, ಠೇವಣಿಗಳಿಗೆ ಸರಿಯಾಗಿ ಬಡ್ಡಿ ಕೊಡದಿರುವುದು, ಸಾಲನೀಡಿಕೆ/ಖಾತೆಗಳ ವರ್ಗಾವಣೆ/ಸಂಲೇಖಗಳ ವಸೂಲಿಯಲ್ಲಿ ವಿಳಂಬ, ಬ್ಯಾಂಕು ನೀಡಿದ ಖಾತರಿಗಳನ್ನು ಮಾನ್ಯ ಮಾಡದಿರುವುದು, ಉದರಿಪತ್ರಗಳ ಮೇರೆಗೆ ರಚಿಸಿದ ಹುಂಡಿಗಳನ್ನು ಪಾವತಿ ಮಾಡದಿರುವುದು, ದೋಷಪೂರ್ಣ ಡ್ರಾಫ್ಟುಗಳ ನೀಡಿಕೆ – ಮುಂತಾದವಕ್ಕೆ ಸಂಬಂಧಿಸಿದ ದೂರುಗಳಿಗೆ ಅವಕಾಶವಿದೆ. ಸಾಲ ನೀಡಲು ಅಥವಾ ಸಾಲದ ಮಿತಿ ಹೆಚ್ಚಿಸಲು ನಿರಾಕರಿಸಿದ ಕಾರಣಕ್ಕೆ ದೂರು ನೀಡುವಂತಿಲ್ಲ. ಕ್ಷುಲ್ಲಕ ಅಥವಾ ದುರುದ್ದೇಶಪೂರಿತ ದೂರುಗಳನ್ನು ಪರಿಗಣಿಸುವುದಿಲ್ಲವೆಂಬುದನ್ನು ಯೋಜನೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಗ್ರಾಹಕರು ಮೊದಲು ಬ್ಯಾಂಕಿಗೆ ಲಿಖಿತರೂಪದ ದೂರನ್ನು ನೀಡಿ, ಬ್ಯಾಂಕಿನಿಂದ ಪರಿಹಾರ ದೊರೆಯದಿದ್ದರೆ ಮಾತ್ರ ಓಂಬುಡ್ಸ್‌ಮನ್ ಅವರಿಗೆ ದೂರು ನೀಡಬಹುದು; ನೇರವಾಗಿ ದೂರು ನೀಡುವಂತಿಲ್ಲ. ಈ ಮೊದಲೇ 1986 ರಿಂದ ಜಾರಿಯಲ್ಲಿರುವ ಬಳಕೆದಾರರ ಹಿತರಕ್ಷಣಾ ಅಧಿನಿಯಮದ ಅನುಕೂಲ ಬ್ಯಾಂಕ್ ಗ್ರಾಹಕರಿಗೂ ಇದ್ದೇ ಇರುತ್ತದೆ. ಆದರೆ ಒಂದೇ ಬಾರಿಗೆ ಎರಡೂ ಕಡೆ ದೂರು ನೀಡಿ ಪರಿಹಾರ ಕೋರುವಂತಿಲ್ಲ. ಎರಡು ಬ್ಯಾಂಕುಗಳ ನಡುವಣ ವಹಿವಾಟು ಸಂಬಂಧದ ಅಥವಾ ಇತರ ವಿವಾದಗಳನ್ನು ಬಗೆಹರಿಸಲು ಬ್ಯಾಂಕಿಂಗ್ ಓಂಬುಡ್ಸ್‌ಮನ್ ಮಧ್ಯಸ್ಥಿಕೆ ವಹಿಸಲು ಕೂಡ ಅವಕಾಶ ಕಲ್ಪಿಸಲಾಗಿದೆ. ಎರಡೂ ಬ್ಯಾಂಕುಗಳು ಲಿಖಿತವಾಗಿ ಒಪ್ಪಿಗೆ ಸಲ್ಲಿಸಿ ಈ ಅವಕಾಶವನ್ನು ಬಳಸಿಕೊಳ್ಳಬಹುದು.

### ಬಳಕೆದಾರ ಹಿತರಕ್ಷಣಾ ಅಧಿನಿಯಮ, 1986 [Consumer Protection Act]

ಈ ಅಧಿನಿಯಮವನ್ನು ಬಳಕೆದಾರರ ಹಿತರಕ್ಷಣೆಗಾಗಿ ಕೇಂದ್ರ ಸರಕಾರವು 1986ರಲ್ಲಿ ಜಾರಿಗೊಳಿಸಿದೆ. ಸರಕಾರ ಮತ್ತು ಸರಕಾರಿ ಪ್ರಾಧಿಕಾರಗಳು / ಸಂಸ್ಥೆಗಳು ಈ ಅಧಿನಿಯಮದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಸಾರ್ವಜನಿಕ ಕ್ಷೇತ್ರ, ಖಾಸಗಿ ಕ್ಷೇತ್ರ ಮತ್ತು ಸಹಕಾರಿ ಕ್ಷೇತ್ರ – ಇವೆಲ್ಲಕ್ಕೂ ಈ ಅಧಿನಿಯಮವು ಅನ್ವಯವಾಗುತ್ತದೆ. ಬ್ಯಾಂಕಿನ ಸೇವೆಗಳೂ ಇದರ ವ್ಯಾಪ್ತಿಯಲ್ಲಿರುವುದರಿಂದ ಎಲ್ಲ ರೀತಿಯ ಬ್ಯಾಂಕುಗಳೂ ಬಳಕೆದಾರ ಹಿತರಕ್ಷಣಾ ಅಧಿನಿಯಮದ ವಿಧಿಗಳಿಗೆ ಒಳಪಡುತ್ತವೆ.

ಗ್ರಾಹಕರ ದೂರುಗಳಿಗೆ ಶೀಘ್ರವೂ, ಸರಳವೂ ಮತ್ತು ಕಡಿಮೆ ಖರ್ಚಿನದೂ ಆದ ಪರಿಹಾರ ವ್ಯವಸ್ಥೆಯನ್ನು ನೀಡುವುದೇ ಈ ಅಧಿನಿಯಮದ ಉದ್ದೇಶ. ಗ್ರಾಹಕರ ದೂರುಗಳಿಗೆ ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಹಾಗೂ ರಾಷ್ಟ್ರ ಮಟ್ಟದಲ್ಲಿ – 3 ಹಂತಗಳ ಪರಿಹಾರ ವ್ಯವಸ್ಥೆಯಿದೆ. ಗ್ರಾಹಕರು ತಮ್ಮ ದೂರುಗಳನ್ನು ಈ ಮುಂದಿನ ವೇದಿಕೆ/ ಆಯೋಗ ಗಳಿಗೆ ಸಲ್ಲಿಸಬಹುದು:

1. (20 ಲಕ್ಷ ರೂ. ವರೆಗಿನ ಪರಿಹಾರಕ್ಕೆ) ಜಿಲ್ಲಾ ಬಳಕೆದಾರ ವೇದಿಕೆ
2. (20 ಲಕ್ಷ ರೂ. ನಿಂದ 1 ಕೋಟಿ ರೂ. ವರೆಗಿನ ಪರಿಹಾರಕ್ಕೆ) ರಾಜ್ಯ ಆಯೋಗ
3. (1 ಕೋಟಿ ರೂ. ಮೇಲ್ಪಟ್ಟ ಮೊತ್ತದ ಪರಿಹಾರಕ್ಕೆ) ರಾಷ್ಟ್ರೀಯ ಆಯೋಗ

ರಾಜ್ಯ/ರಾಷ್ಟ್ರ ಆಯೋಗದಲ್ಲಿ ಅಧ್ಯಕ್ಷರೂ, (ಕನಿಷ್ಠ) ಒಬ್ಬ ಮಹಿಳೆ ಸೇರಿ 4 ಅಥವಾ ಹೆಚ್ಚಿನ ಸಂಖ್ಯೆಯ ಸದಸ್ಯರಿರುತ್ತಾರೆ. ಜಿಲ್ಲಾ ಮಟ್ಟದ ವೇದಿಕೆಯಲ್ಲಿ ಅಧ್ಯಕ್ಷರೂ ಕನಿಷ್ಠ ಒಬ್ಬ ಮಹಿಳೆಯೂ ಸೇರಿದಂತೆ ಒಟ್ಟು ಮೂವರು ಸದಸ್ಯರಿರುತ್ತಾರೆ. ವೇದಿಕೆ ಹಾಗೂ ಆಯೋಗಗಳ ಅಧ್ಯಕ್ಷರು ಜಿಲ್ಲಾ ನ್ಯಾಯಾಧೀಶ, ಉಚ್ಚ/ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಂತೆ ಅನುಭವ ಹೊಂದಿದವರಾಗಿರುತ್ತಾರೆ. ಸದಸ್ಯರಿಗೂ ವಿದ್ಯಾರ್ಹತೆ, ವಯಸ್ಸು ಹಾಗೂ ಆಡಳಿತಾನುಭವ ಆಧರಿಸಿ ಅರ್ಹತೆಯ ಮಾನದಂಡಗಳಿವೆ. ವೇದಿಕೆ / ಆಯೋಗಗಳ ಕಾರ್ಯವೂ ಒಳಗೊಂಡಂತೆ, ಬಳಕೆದಾರರ ಹಿತರಕ್ಷಣೆಗೆ ಇತರ ಉಪಾಯಗಳು ಇವನ್ನು ಕುರಿತ ನೀತಿ ನಿಯಮಗಳನ್ನು ರೂಪಿಸಲು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗ್ರಾಹಕ ಸಲಹಾ ಮಂಡಲಿಗಳು [Consumer councils] ಇದ್ದು ಜಿಲ್ಲಾಧಿಕಾರಿ, ರಾಜ್ಯ / ಕೇಂದ್ರ ಸರಕಾರದ ಒಬ್ಬ ಸಚಿವರು ಈ ಸಲಹಾ ಮಂಡಲಿಗಳ ಅಧ್ಯಕ್ಷರಾಗಿರುತ್ತಾರೆ. ಬಳಕೆದಾರರು ದೂರು ನೀಡಬೇಕಾದದ್ದು ಬಳಕೆದಾರ ವೇದಿಕೆ/ಆಯೋಗಗಳಿಗೆ; ಸಲಹಾ ಮಂಡಲಿಗಳಿಗಲ್ಲ. ಬ್ಯಾಂಕಿನ ಸಂದರ್ಭದಲ್ಲಿ ಬಳಕೆದಾರರೆಂದರೆ ಬ್ಯಾಂಕಿನ ವಿವಿಧ ಗ್ರಾಹಕರೇ. ಬಳಕೆದಾರ ವೇದಿಕೆಗೆ ಅಥವಾ ಆಯೋಗಕ್ಕೆ ದೂರು ನೀಡುವ ಮೊದಲು ಬ್ಯಾಂಕಿಗೆ ಲಿಖಿತ ದೂರು ಸಲ್ಲಿಸಿ, ಸಮಾಧಾನಕರ ಪ್ರತಿಕ್ರಿಯೆ ಅಥವಾ ಪರಿಹಾರ ದೊರೆಯದಿದ್ದಲ್ಲಿ ಮಾತ್ರ ಇಲ್ಲಿಗೆ ದೂರು ನೀಡಬಹುದು.

### ದೂರು ನೀಡುವುದು ಹೇಗೆ?

- ದೂರು ನೀಡಲು ನಿರ್ದಿಷ್ಟ ನಮೂನೆಯಿಲ್ಲ. ದೂರುದಾರರ ಹೆಸರು ಮತ್ತು ವಿಳಾಸ; ಬ್ಯಾಂಕಿನ ಹೆಸರು ಮತ್ತು ವಿಳಾಸ; ಸೇವೆಯಲ್ಲನ ದೋಷ ಅಥವಾ ಕೊರತೆಯ ಸಂಕ್ಷಿಪ್ತ ವಿವರ; ಇದ್ದಲ್ಲಿ, ಸಂಬಂಧಿಸಿದ ದಾಖಲೆಗಳು (ಉದಾ: ಖಾತೆಯ ವಹಿವಾಟುಗಳ ತಃಖ್ತೆ, ಡ್ರಾಫ್ಟ್, ಚೆಕ್, ಹುಂಡಿ, ಬ್ಯಾಂಕ್ ನೀಡಿದ ಖಾತರಿ ಒಪ್ಪಂದ, ಸಾಲ ಮಂಜೂರಾತಿ ಪತ್ರ ಮುಂತಾದವುಗಳ ನಕಲು, ಬ್ಯಾಂಕಿಗೆ ನೀಡಿರುವುದನ್ನು ಕುರಿತ ಸಾಕ್ಷ್ಯ); ವೇದಿಕೆಯಿಂದ ಕೋರುವ ಪರಿಹಾರ – ಇವನ್ನು ಖಾಲಿಹಾಳೆಯಲ್ಲಿ (ಸ್ಟ್ಯಾಂಪ್ ಶುಲ್ಕವಿಲ್ಲದೆ) ಲಿಖಿತವಾಗಿ ದಾಖಲಿಸಿ ಸಹಿ ಮಾಡಿ ನೇರವಾಗಿ ಅಥವಾ ಅಂಚೆ/ಕೊರಿಯರ್ ಮೂಲಕ ಬಳಕೆದಾರ ವೇದಿಕೆಗೆ / ಆಯೋಗಕ್ಕೆ ಸಲ್ಲಿಸಬೇಕು. ಸೇವೆಯಲ್ಲಿ ಲೋಪ ಉಂಟಾದ 1 ವರ್ಷದ ಅವಧಿಯೊಳಗೆ ದೂರು ನೀಡತಕ್ಕದ್ದು.
- ದೂರಿಗೆ ಸಂಬಂಧಿಸಿದ ಕಕ್ಷಿಗಳು ನ್ಯಾಯಾಲಯಕ್ಕೆ ಹಾಜರಾಗುವ ಹಾಗೆ ವೇದಿಕೆಯಲ್ಲಿ ಹಾಜರಾಗಬೇಕು. ವಕೀಲರ ಅಗತ್ಯವಿಲ್ಲ. ದೂರು ಸಲ್ಲಿಸಿದ 3 ರಿಂದ 5 ತಿಂಗಳೊಳಗೆ ಪ್ರಕರಣವನ್ನು ಇತ್ಯರ್ಥವಾಗಬೇಕೆಂಬುದು ಅಧಿನಿಯಮದ ಆಶಯ.

ಮೇಲ್ಮನವಿಗೂ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ವೇದಿಕೆಯ ತೀರ್ಪು ತೃಪ್ತಿಕರವಾಗಿರದಿದ್ದರೆ ರಾಜ್ಯ ಆಯೋಗಕ್ಕೂ, ಅಲ್ಲಿನ ತೀರ್ಪು ಕುರಿತು ರಾಷ್ಟ್ರೀಯ ಆಯೋಗಕ್ಕೂ ಮೇಲ್ಮನವಿಯನ್ನು ಸಲ್ಲಿಸಬಹುದು. ರಾಷ್ಟ್ರೀಯ ಆಯೋಗದ ತೀರ್ಪು ಕುರಿತು ಸರ್ವೋಚ್ಚ ನ್ಯಾಯಲಯಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ. ಮೇಲ್ಮನವಿ ಸಲ್ಲಿಸುವಾಗ ಕೆಳಹಂತದ ವೇದಿಕೆ/ ಆಯೋಗದ ತೀರ್ಪಿನ ಪ್ರತಿಯನ್ನು ಲಗತ್ತಿಸಬೇಕು. ಮೇಲ್ಮನವಿ ಮಾಡುವ ವಿಧಾನವೂ ದೂರು ನೀಡಿಕೆಯಂತೆಯೇ.

ಸಂಲೇಖಗಳ ಪಾವತಿ/ವಸೂಲಾತಿ/ಖಾತೆಗಳ ವರ್ಗಾವಣೆ/ ಖಾತರಿಗಳ ನೀಡಿಕೆ ಮುಂತಾದ ಸಂದರ್ಭಗಳಲ್ಲಿ ವಿಳಂಬ, ಚೆಕ್ಕುಗಳ ತಪ್ಪಾದ ಪಾವತಿ ಅಥವಾ ಚೆಕ್ಕುಗಳ ದೋಷಪೂರ್ಣ ಅನಾದರಣೆ, ಡ್ರಾಫ್ಟ್ ಕಳೆದಾಗ ನಕಲು ಡ್ರಾಫ್ಟುಗಳ ನೀಡಿಕೆಗೆ ನಕಾರ ಅಥವಾ ವಿಳಂಬ, ದೋಷಪೂರ್ಣ ಡ್ರಾಫ್ಟುಗಳು, ಸಾಲಗಳಿಗೆ ಹೆಚ್ಚಿನ ಬಡ್ಡಿ ದರ ವಿಧಿಸುವುದು, ಠೇವಣಿಗಳಿಗೆ ಕಡಿಮೆ ದರದಲ್ಲಿ ಬಡ್ಡಿ ಪಾವತಿ, ಸಾಲ ನೀಡಿಕೆಯಲ್ಲಿ ವಿಳಂಬ ಅಥವಾ ರಿಸರ್ವ್ ಬ್ಯಾಂಕಿನ ನಿರ್ದೇಶಗಳ ಉಲ್ಲಂಘನೆ, ಶುಲ್ಕ ಇಲ್ಲವೇ ದಂಡಬಡ್ಡಿ ಮುಂತಾದವುಗಳನ್ನು ವಿಧಿಸುವಲ್ಲಿ ಅನ್ಯಾಯ – ಹೀಗೆ ಬ್ಯಾಂಕುಗಳ ಸೇವೆಯಲ್ಲಿ ವಿವಿಧ ಲೋಪದೋಷಗಳನ್ನು ಕುರಿತು ಬ್ಯಾಂಕಿನ ಗ್ರಾಹಕರು ಬಳಕೆದಾರ ಹಿತರಕ್ಷಣಾ ವೇದಿಕೆಗಳಿಗೆ ದೂರು ಸಲ್ಲಿಸಿ ಪರಿಹಾರ ಪಡೆದಿದ್ದಾರೆ. ತಮ್ಮ ಸೇವೆಯಲ್ಲಿ ಗ್ರಾಹಕರಿಗೆ ಇಂಥ ಕೊರತೆಗಳು ಬಾರದಂತೆ ಬ್ಯಾಂಕುಗಳು ಸದಾ ಎಚ್ಚರವಾಗಿರಬೇಕಾಗಿದೆ.

### ಆರ್ಥಿಕ ಸೇರ್ಪಡೆ [Financial Inclusion]

ಕಡುಬಡವರು, ದಲಿತರು, ಗ್ರಾಮೀಣ ಪ್ರದೇಶಗಳಲ್ಲಿರುವವರು, ಕೊಳಚೆಪ್ರದೇಶಗಳಲ್ಲಿ ವಾಸಿಸುವವರ, ಅನಕ್ಷರಸ್ಥರು, ಮಹಿಳೆಯರು, ನಿರುದ್ಯೋಗಿಗಳು, ಅಂಗವಿಕಲರು, ವೃದ್ಧರು, ಕೂಲಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು – ಇಂಥ ನಾನಾ ವರ್ಗದ ಜನರಿಗೆ ಬ್ಯಾಂಕುಗಳ ಮೂಲಕ ಹಣಕಾಸು ಸೇವೆಗಳು ಸರಿಯಾಗಿ ದೊರೆಯುತ್ತಿಲ್ಲ. ಇಂಥವರು ತಮ್ಮ ಉಳಿತಾಯದ ಹಣವನ್ನು ಅನುಮಾನಾಸ್ಪದ ವ್ಯಕ್ತಿಗಳ ಬಳಿಯಲ್ಲಿ ಅಥವಾ ಅನಧಿಕೃತ ಸಂಸ್ಥೆಗಳಲ್ಲಿ ವಿನಿಯೋಗಿಸಿ ನಷ್ಟಕ್ಕೆ ಒಳಗಾಗುವುದೇ ಹೆಚ್ಚು. ಇಂಥವರಿಗೆ ಸಾಲಗಳು ದೊರೆಯುವುದಿಲ್ಲ; ದೊರೆತರೂ ಬಡ್ಡಿದರಗಳು ತುಂಬಾ ಹೆಚ್ಚಾದ ಕಾರಣ ಸಾಲದ ಸುಳಿಯಲ್ಲಿ ಸಿಲುಕಿ ನರಳುತ್ತಾರೆ. ಸಮಾಜದ ಎಲ್ಲ ವರ್ಗದ ಜನರಿಗೂ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಹಣಕಾಸು ಸೇವೆಗಳು ಲಭ್ಯವಾಗಬೇಕೆಂಬ ಉದ್ದೇಶದಿಂದ ಭಾರತ ಸರಕಾರ ಹಾಗೂ ಭಾರತದ ರಿಸರ್ವ್ ಬ್ಯಾಂಕು 'ಆರ್ಥಿಕ ಸೇರ್ಪಡೆ' ಯೋಜನೆಯನ್ನು ಜಾರಿಗೆ ತಂದಿದೆ.

ಮುಂದುವರೆಯುವುದು...

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಭಾರತದ ಷೇರುಮಾರುಕಟ್ಟೆಯಲ್ಲಿ ಮುಖ್ಯವಾಗಿರುವ ಸೂಚ್ಯಂಕಗಳು ಇವು: ________**

ಎ) ಸಿ.ಆರ್.ಆರ್. ಮತ್ತು ಎಸ್.ಎಲ್.ಆರ್.

ಬಿ) ಸೆನ್ಸೆಕ್ಸ್ ಮತ್ತು ನಿಫ್ಟಿ

ಸಿ) ಕ್ಯಾಪಿಟಲ್ ಅಡೆಕ್ವೆಸಿ ಮತ್ತು ಕರೆಂಟ್ ರೇಷಿಯೋ

ಡಿ) ಚಿಲ್ಲರೆ ದರ ಮತ್ತು ಸಗಟು ದರ

**2. ಭಾರತದ ಷೇರು ವಿನಿಮಯ ಕೇಂದ್ರ ಇಲ್ಲಿದೆ: __________**

ಎ) ಮುಂಬಯಿ

ಬಿ) ಕೋಲ್ಕತಾ

ಸಿ) ದೆಹಲಿ

ಡಿ) ಹೈದರಾಬಾದ್

**3. ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರಸ್ಥಾನವಾದ ಜಿನೀವಾ ನಗರವಿರುವ ದೇಶ ಯಾವುದು?**

ಎ) ಫಿಲಿಪೈನ್ಸ್

ಬಿ) ಸ್ವಿಟ್ಜರ್ಲೆಂಡ್

ಸಿ) ನೆದರ್ಲೆಂಡ್ಸ್

ಡಿ) ಸ್ಕಾಟ್ಲೆಂಡ್

**4. ಈ ಮುಂದಿನವುಗಳಲ್ಲಿ ಯಾವ ಸಂಸ್ಥೆಯ ಕೇಂದ್ರ ಕಚೇರಿಯು ಪ್ಯಾರಿಸ್‌ನಲ್ಲಿದೆ?**

ಎ) ಡಬ್ಲ್ಯು.ಎಚ್.ಒ.

ಬಿ) ವಿಶ್ವ ಬ್ಯಾಂಕ್

ಸಿ) ಯುನೆಸ್ಕೊ

ಡಿ) ಐ.ಎಂ.ಎಫ್.

**5. ಯು.ಎನ್.ಸಿ.ಟಿ.ಎ.ಡಿ. (UNCTAD) ಸಂಸ್ಥೆಯು ಇವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದ್ದು?**

ಎ) ವಿಶ್ವ ಅಭಿವೃದ್ಧಿ

ಬಿ) ವಿಶ್ವ ಸಂಶೋಧನೆ

ಸಿ) ವಿಶ್ವ ಸಹಕಾರ

ಡಿ) ವಿಶ್ವ ವ್ಯಾಪಾರ

**6. 'ಸಾರ್ಕ್' ಎಂಬುದೇನು?**

ಎ) ದಕ್ಷಿಣ ಆಫ್ರಿಕಾದ ಸಾಂಸ್ಕೃತಿಕ ವಲಯಗಳು

ಬಿ) ವಿಜ್ಞಾನ ಮತ್ತು ಸಂಶೋಧನೆಗಳಿಗಾಗಿ ಅಂತರ್ರಾಷ್ಟ್ರೀಯ ಸಹಕಾರ ಸಂಸ್ಥೆ

ಸಿ) ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷಿಯಾದ ಕೆಲವು ದೇಶಗಳು ರಚಿಸಿಕೊಂಡ ಒಕ್ಕೂಟ

ಡಿ) ಶಬ್ದ ಮತ್ತು ಶಬ್ದಸಂಬಂಧಿ ಮಾಲಿನ್ಯ ನಿವಾರಣೆಗೆ ರಚಿಸಿದ ಶೃಂಗ ಸಂಸ್ಥೆ

**7. ಕಿಮ್ ಜೋಂಗ್ ಉನ್ (Kim Jong-un) ಯಾರು?**

ಎ) ಕಾಂಬೋಡಿಯಾದ ಅಧ್ಯಕ್ಷ

ಬಿ) ಜಪಾನಿನ ತಂತ್ರಜ್ಞ

ಸಿ) ಚೀನಾ ದೇಶದ ವಿಜ್ಞಾನಿ

ಡಿ) ಉತ್ತರ ಕೊರಿಯಾದ ನಾಯಕ

**8. ರಷ್ಯಾ ದೇಶದ ಅಧ್ಯಕ್ಷರು ಯಾರು?**

ಎ) ಡಿಮಿಟ್ರಿ ಮೆಡ್ ವೆಡೇವ್

ಬಿ) ವ್ಲಾಡಿಮಿರ್ ಪುಟಿನ್

ಸಿ) ನರರೇ

ಡಿ) ಐಸಾಕ್ ಇಸಾಬೆಲ್

**9. ಇವುಗಳಲ್ಲಿ ಯಾವ ದೇಶವು ಸಾರ್ಕ್ ಗುಂಪಿನಲ್ಲಿಲ್ಲ?**

ಎ) ದಕ್ಷಿಣ ಕೊರಿಯ, ಉತ್ತರ ಕೊರಿಯ

ಬಿ) ಪಾಕಿಸ್ತಾನ, ಬಾಂಗ್ಲಾ

ಸಿ) ಶ್ರೀಲಂಕಾ, ಮಾಲ್ದಿವ್ಸ್

ಡಿ) ನೇಪಾಳ, ಭೂತಾನ

**10. 'ಸುವಾರ ಎಲಿಯ' ಎಂಬುದೇನು?**

ಎ) 'ಸಿಕ್ವರ ಬೆಳಕು' ಎಂಬ ಧಾರ್ಮಿಕ ಗ್ರಂಥ

ಬಿ) ಉತ್ತರ ಅಮೆರಿಕಾದ ಒಂದು ಕಣಿವೆ

ಸಿ) ಶ್ರೀಲಂಕಾದ ಒಂದು ಗಿರಿಧಾಮ

ಡಿ) ಇಂಗ್ಲೆಂಡಿನ ಒಬ್ಬ ರಾಜಕುಮಾರಿಯ ಹೆಸರು

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -A, 2 -B , 3 –D , 4 –A, 5 – D, 6 – A, 7 – D, 8 – A, 9 –D , 10 – C